೦೩.	ಹನುಮಂತಪ್ಪ	ಎಂ.ಮ್ಯೂಜಿಕ್	ಪಜಾ	೯೭೪೩೬೯೫೪೨೩	೦೦೧೧	ಇದ್ದಾರೆ	
೦೪.	ಲೀಲಕ್ಕ ರಂ.ಚಲವಾದಿ	ಪಿಎಚ್.ಡಿ.	ಪಜಾ	೭೦೨೬೮೩೮೩೭೬	೨೦೧೫-೧೬	ಇದ್ದಾರೆ	
೦೫.	ಜೇನವ್ವ ಲಮಾಣಿ	ಎಂ.ಮ್ಯೂಜಿಕ್	ಪಜಾ	೯೬೨೦೮೫೦೮೬೩	೧೪೦೧೧೧೪೦೬೦೦೧೨	ಇದ್ದಾರೆ	
೦೬.	ದೇವಮ್ಮ	ಎಂ.ಮ್ಯೂಜಿಕ್	ಪಜಾ	೯೯೮೦೧೭೮೧೯೯೩	೦೦೧೩	ಇದ್ದಾರೆ	
೦೭.	ರೂಪ	ಎಂ.ಮ್ಯೂಜಿಕ್	ಪಜಾ	೯೯೦೧೨೦೮೨೬೭	೦೦೧೪	ಇದ್ದಾರೆ	
೦೮.	ಶ್ರೀದೇವಿ	ಎಂ.ಮ್ಯೂಜಿಕ್	ಪಜಾ	೯೭೪೩೬೩೮೮೪೪	೦೦೧೫	ಇದ್ದಾರೆ	
೦೯.	ನೀಲಕಂಠ ಎಚ್.	ಬಿ.ಮ್ಯೂಜಿಕ್	ಪಜಾ	೮೮೮೪೯೨೫೭೬೬	೧೫೦೧೧೪೦೭೦೦೦೩	ಇಲ್ಲ	

೧೦.	ಪೂಜಾರ ಗಂಗಮ್ಮ	ಬಿ.ಮ್ಯೂಜಿಕ್	ಪಜಾ		೦೦೦೪	ಇದ್ದಾರೆ	
೧೧.	ಶರಣಮ್ಮ	ಬಿ.ಮ್ಯೂಜಿಕ್	ಪಜಾ	೭೪೧೧೮೯೯೬೨೦	೦೦೦೮	ಇದ್ದಾರೆ	
೧೨.	ಉಷಾ	ಬಿ.ಮ್ಯೂಜಿಕ್	ಪಜಾ	೭೩೫೩೭೫೬೧೪೧	೧೪೦೧೧೪೦೭೦೦೦೫	ಇದ್ದಾರೆ	
೧೩.	ಕವಿತಾ ಜಿ.ವಿ.	ಬಿ.ಮ್ಯೂಜಿಕ್	ಪಜಾ	೮೪೮೩೨೦೫೯೫	೦೦೦೮	ಇದ್ದಾರೆ	
೧೪.	ಯಶೋಧ	ಬಿ.ಮ್ಯೂಜಿಕ್	ಪಜಾ	೯೭೪೧೨೨೧೧೨೯	೧೪೦೧೧೪೦೭೦೦೦೨	ಇದ್ದಾರೆ	
೧೫.	ದುಷ್ಯಂತರಾಜ	ಎಂ. ಮ್ಯೂಜಿಕ್	ಪಪಂ	೭೪೧೧೬೭೫೩೭೧	೦೦೦೪	ಇಲ್ಲ	
೧೬.	ಶೃತಿ	ಎಂ. ಮ್ಯೂಜಿಕ್	ಪಪಂ		೦೦೧೦	ಇಲ್ಲ	
೧೭.	ಪದ್ಮಾವತಿ	ಎಂ. ಮ್ಯೂಜಿಕ್	ಪಪಂ	೭೩೫೩೯೯೪೫೮೭	೦೦೦೬	ಇದ್ದಾರೆ	
೧೮.	ಮಂಜಣ್ಣ ಎನ್.	ಬಿ.ಮ್ಯೂಜಿಕ್	ಪಪಂ	೯೭೪೩೧೮೯೯೦೨೬	೦೦೦೬	ಇದ್ದಾರೆ	
೧೯.	ಎನ್.ನಾಗರಾಜ	ಬಿ.ಮ್ಯೂಜಿಕ್	ಪಪಂ	೯೮೮೦೧೯೭೨೫೧	೦೦೦೧	ಇದ್ದಾರೆ	
೨೦.	ಜಿ.ವೈ.ಸುಧಾ	ಬಿ.ಮ್ಯೂಜಿಕ್	ಪಪಂ	೯೪೮೨೮೫೦೨೯೮	೦೦೦೯	ಇದ್ದಾರೆ	
೨೧.	ನರಸಿಂಹ	ಬಿ.ಮ್ಯೂಜಿಕ್	ಪಪಂ	೯೭೪೧೨೨೧೧೨೯	೧೪೦೧೧೪೦೭೦೦೦೨	ಇದ್ದಾರೆ	

ಜಾನಪದ ಅಧ್ಯಯನ ವಿಭಾಗ

ಕ್ರ.ಸಂ.	ವಿದ್ಯಾರ್ಥಿ ಹೆಸರು	ಕೋರ್ಸ್ ಪಿಎಚ್.ಡಿ./ಎಂ.ಫಿಲ್/ ಎಂ.ವಿ.ಎ./ಎಂ.ಮ್ಯೂಜಿಕ್ /ಬಿ.ಮ್ಯೂಜಿಕ್/ಎಂ.ಎ. ಪಿಎಚ್.ಡಿ.	ಜಾತಿ ಪಜಾ/ ಪಪಂ	ವಿದ್ಯಾರ್ಥಿಗಳ ದೂರವಾಣಿ ಸಂಖ್ಯೆ	ನೋಂದಣಿ ಸಂಖ್ಯೆ ಮತ್ತು ವರ್ಷ	ವಸತಿ ನಿಲಯದಲ್ಲಿ ಇದ್ದಾನೋ/ ಳೋ ಇಲ್ಲವೋ	ಪಡೆಯುತ್ತಿರುವ ಶಿಷ್ಯವೇತನದ ವಿವರ ಮಾಸಿಕ ಆರ್ಥಿಕ ನೆರವು/ ಜೆ.ಆರ್.ಎಫ್/ಆರ್.ಜಿ.ಎನ್. ಎಫ್/ಐ.ಸಿ.ಹೆಚ್.ಆರ್/ ಐ.ಸಿ.ಎಸ್.ಎಸ್.ಆರ್
೦೧.	ರೇವಣಸಿದ್ದಪ್ಪ	ಪಿಎಚ್.ಡಿ.	ಪಜಾ	೮೧೦೫೧೪೨೦೯೪	೧೦೬೧/ ೧೧.೦೮.೨೦೧೧	ಇದ್ದಾರೆ	ಮಾಸಿಕ ಆರ್ಥಿಕ ನೆರವು
೦೨.	ರೇಣುಕುಮಾರಿ ಆರ್.ಟಿ	ಪಿಎಚ್.ಡಿ.	ಪಜಾ	೮೭೪೭೮೭೯೫೭	೧೦೬೨/ ೧೧.೦೮.೨೦೧೧	ಇಲ್ಲ	ಆರ್.ಜಿ.ಎನ್.ಎಫ್
೦೩.	ನಿರಂಜನಮೂರ್ತಿ ಟಿ.	ಪಿಎಚ್.ಡಿ.	ಪಜಾ	೯೭೪೦೧೧೪೬೬೦	೧೦೬೩/ ೧೦.೦೮.೨೦೧೧	ಇಲ್ಲ	ಜೆ.ಆರ್.ಎಫ್
೦೪.	ಪಾಲಯ್ಯ ಜಿ.	ಪಿಎಚ್.ಡಿ.	ಪಪಂ	೯೪೮೩೧೯೫೪	೧೨೨೪/ ೧೩.೦೯.೨೦೧೩	ಇದ್ದಾರೆ	ಮಾಸಿಕ ಆರ್ಥಿಕ ನೆರವು
೦೫.	ತ್ರಿವೇಣಿ ಜಿ.ಬಿ.	ಪಿಎಚ್.ಡಿ.	ಪಪಂ	೮೯೭೦೯೨೫೬೦೧	೧೪೦೧೧೦೦೨೦೦೫೨	ಇದ್ದಾರೆ	ಮಾಸಿಕ ಆರ್ಥಿಕ ನೆರವು
೦೬.	ಗಂಗಮ್ಮ	ಪಿಎಚ್.ಡಿ.	ಪಪಂ	೯೯೦೦೧೧೫೯೨೬	೧೨.೦೯.೨೦೧೪	ಇದ್ದಾರೆ	ಮಾಸಿಕ ಆರ್ಥಿಕ ನೆರವು

ಚರಿತ್ರೆ ವಿಭಾಗ

ಕ್ರ.ಸಂ.	ವಿದ್ಯಾರ್ಥಿ ಹೆಸರು	ಕೋರ್ಸ್ ಪಿಎಚ್.ಡಿ./ಎಂ.ಫಿಲ್/ ಎಂ.ವಿ.ಎ./ಎಂ.ಮ್ಯೂಜಿಕ್ /ಬಿ.ಮ್ಯೂಜಿಕ್/ಎಂ.ಎ. ಪಿಎಚ್.ಡಿ.	ಜಾತಿ ಪಜಾ/ ಪಪಂ	ವಿದ್ಯಾರ್ಥಿಗಳ ದೂರವಾಣಿ ಸಂಖ್ಯೆ	ನೋಂದಣಿ ಸಂಖ್ಯೆ ಮತ್ತು ವರ್ಷ	ವಸತಿ ನಿಲಯದಲ್ಲಿ ಇದ್ದಾನೋ/ ಳೋ ಇಲ್ಲವೋ	ಪಡೆಯುತ್ತಿರುವ ಶಿಷ್ಯವೇತನದ ವಿವರ ಮಾಸಿಕ ಆರ್ಥಿಕ ನೆರವು/ ಜೆ.ಆರ್.ಎಫ್/ಆರ್.ಜಿ.ಎನ್. ಎಫ್/ ಐ.ಸಿ.ಹೆಚ್.ಆರ್/ ಐ.ಸಿ.ಎಸ್.ಎಸ್.ಆರ್
೦೧.	ವಿಜಯಲಕ್ಷ್ಮಮ್ಮ ಜಿ.	ಪಿಎಚ್.ಡಿ.	ಪಜಾ	೯೯೧೬೮೩೫೩೭	೮೯೧/ ೨೬.೧೧.೨೦೦೯	ಇಲ್ಲ	ಆರ್.ಜಿ.ಎನ್.ಎಫ್
೦೨.	ಮುನಿರಾಜು ಎಸ್.	ಪಿಎಚ್.ಡಿ.	ಪಜಾ	೯೪೮೦೫೧೫೩೭೬	೯೫೫/ ೧೧.೦೮.೨೦೧೦	ಇದ್ದಾರೆ	ಮಾಸಿಕ ಆರ್ಥಿಕ ನೆರವು
೦೩.	ವೀಣಾಕುಮಾರಿ ಡಿ.ಎಂ.	ಪಿಎಚ್.ಡಿ.	ಪಜಾ	೭೩೫೩೭೪೬೭೯	೧೧೧/ ೧೭.೦೯.೨೦೧೨	ಇದ್ದಾರೆ	ಮಾಸಿಕ ಆರ್ಥಿಕ ನೆರವು
೦೪.	ಬಸವರಾಜು ಕೆ.ಆರ್.	ಪಿಎಚ್.ಡಿ.	ಪಜಾ	೯೯೮೦೯೮೦೯೭೭	೧೧೨೦/ ೧೮.೦೯.೨೦೧೨	ಇದ್ದಾರೆ	ಮಾಸಿಕ ಆರ್ಥಿಕ ನೆರವು
೦೫.	ತಿಪ್ಪಣ್ಣ	ಪಿಎಚ್.ಡಿ.	ಪಜಾ	೯೯೦೨೧೭೪೪೧೧೮	೧೧೧೮/ ೨೪.೦೯.೨೦೧೨	ಇದ್ದಾರೆ	ಮಾಸಿಕ ಆರ್ಥಿಕ ನೆರವು
೦೬.	ಭೋಜ್ಯನಾಯ್ಕ ಎಲ್.ಎಚ್.	ಪಿಎಚ್.ಡಿ.	ಪಜಾ	೯೦೦೮೦೫೯೫೯೪	೧೧೨೧/ ೨೪.೦೯.೨೦೧೨	ಇದ್ದಾರೆ	ಮಾಸಿಕ ಆರ್ಥಿಕ ನೆರವು
೦೭.	ಕೃಷ್ಣಮೂರ್ತಿ ಕೆ.ವಿ.	ಪಿಎಚ್.ಡಿ.	ಪಪಂ	೯೭೩೧೬೯೪೬೪೩	೧೨೦೦/ ೧೭.೦೯.೨೦೧೩	ಇದ್ದಾರೆ	ಮಾಸಿಕ ಆರ್ಥಿಕ ನೆರವು
೦೮.	ಮುನಿರಾಜು ಎಂ.	ಪಿಎಚ್.ಡಿ.	ಪಜಾ	೯೯೦೦೨೭೬೬೧೦	೧೪೦೧೦೭೦೨೦೦೩೪/ ೧೫.೦೯.೨೦೧೪	ಇದ್ದಾರೆ	ಮಾಸಿಕ ಆರ್ಥಿಕ ನೆರವು
೦೯.	ಶಿವರಾಜ್ ಜಿ.ಓ.	ಪಿಎಚ್.ಡಿ.	ಪಪಂ	೯೯೦೧೭೨೬೦೮೪	೧೪೦೧೦೭೦೨೦೦೩೭/ ೧೫.೦೯.೨೦೧೪	ಇದ್ದಾರೆ	ಮಾಸಿಕ ಆರ್ಥಿಕ ನೆರವು
೧೦.	ನಿರ್ಮಲ ಎಂ.	ಪಿಎಚ್.ಡಿ.	ಪಪಂ	೭೨೦೪೪೦೦೯೩೭	೧೪೦೧೦೭೦೨೦೦೩೧/ ೧೫.೦೯.೨೦೧೪	ಇಲ್ಲ	ಮಾಸಿಕ ಆರ್ಥಿಕ ನೆರವು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕ್ರ.ಸಂ.	ವಿದ್ಯಾರ್ಥಿ ಹೆಸರು	ಕೋರ್ಸ್ ಪಿಎಚ್.ಡಿ./ಎಂ.ಫಿಲ್/ ಎಂ.ವಿ.ಎ./ಎಂ.ಮ್ಯೂಜಿಕ್ /ಬಿ.ಮ್ಯೂಜಿಕ್/ಎಂ.ಎ. ಪಿಎಚ್.ಡಿ.	ಜಾತಿ ಪಜಾ/ ಪಪಂ	ವಿದ್ಯಾರ್ಥಿಗಳ ದೂರವಾಣಿ ಸಂಖ್ಯೆ	ನೋಂದಣಿ ಸಂಖ್ಯೆ ಮತ್ತು ವರ್ಷ	ವಸತಿ ನಿಲಯದಲ್ಲಿ ಇದ್ದಾನೋ/ ಳೋ ಇಲ್ಲವೋ	ಪಡೆಯುತ್ತಿರುವ ಶಿಷ್ಯವೇತನದ ವಿವರ ಮಾಸಿಕ ಆರ್ಥಿಕ ನೆರವು/ ಜೆ.ಆರ್.ಎಫ್/ಆರ್.ಜಿ.ಎನ್. ಎಫ್/ ಐ.ಸಿ.ಹೆಚ್.ಆರ್/ ಐ.ಸಿ.ಎಸ್.ಎಸ್.ಆರ್
೧	ನಾಗೇಶ ಹೆಚ್.ಎ.	ಪಿಹೆಚ್.ಡಿ.	ಪರಿಶಿಷ್ಟ ಜಾತಿ	೯೮೮೬೯೬೯೮	೧೨೦೯/ ೧೭.೦೯.೨೦೧೩	ವಸತಿ ನಿಲಯದಲ್ಲಿದ್ದಾರೆ	ಮಾಸಿಕ ಆರ್ಥಿಕ ನೆರವು
೨	ಲೋಕಣ್ಣ ಭಜಂತ್ರಿ	ಪಿಹೆಚ್.ಡಿ.	ಪರಿಶಿಷ್ಟ ಜಾತಿ	೯೮೪೫೨೩೪೯೩೦	೧೨೦೭/ ೨೦.೦೯.೨೦೧೩	ವಸತಿ ನಿಲಯದಲ್ಲಿದ್ದಾರೆ	ಮಾಸಿಕ ಆರ್ಥಿಕ ನೆರವು
೩	ರೇವ್ಯಾ ಗೋವಿಂದ ನಾಯಕ	ಪಿಹೆಚ್.ಡಿ.	ಪರಿಶಿಷ್ಟ ಜಾತಿ	೯೬೮೬೫೪೯೮೮	೧೨೦೬/ ೧೬.೦೯.೨೦೧೩	ವಸತಿ ನಿಲಯದಲ್ಲಿದ್ದಾರೆ	ಮಾಸಿಕ ಆರ್ಥಿಕ ನೆರವು
೪	ಕು. ಲತಾ ಬಿ. ಕೆ.	ಪಿಹೆಚ್.ಡಿ.	ಪರಿಶಿಷ್ಟ ಪಂಗಡ	೮೭೪೮೯೫೭೫೪೭	೧೪೦೧೦೮೦೨೦೦೪೭ /೧೧.೦೯.೨೦೧೪	ವಸತಿ ನಿಲಯದಲ್ಲಿದ್ದಾರೆ	ಮಾಸಿಕ ಆರ್ಥಿಕ ನೆರವು
೫	ರವೀಶ್ ಜಿ.ಎನ್.	ಪಿಹೆಚ್.ಡಿ.	ಪರಿಶಿಷ್ಟ ಪಂಗಡ	೯೭೪೧೪೪೧೭೧೪	೧೦೮೫/ ೦೮.೦೮.೨೦೧೧	ವಸತಿ ನಿಲಯದಲ್ಲಿದ್ದಾರೆ	ಮಾಸಿಕ ಆರ್ಥಿಕ ನೆರವು
೬	ಸಣ್ಣಪಾಲಯ್ಯ ಪಿ.ಬಿ.	ಪಿಹೆಚ್.ಡಿ.	ಪರಿಶಿಷ್ಟ ಪಂಗಡ	೭೨೫೯೭೨೯೭೧೬	೧೧೨೯/ ೨೪.೦೯.೨೦೧೨	ವಸತಿ ನಿಲಯದಲ್ಲಿದ್ದಾರೆ	ಮಾಸಿಕ ಆರ್ಥಿಕ ನೆರವು
೭	ರಮೇಶ ಹೆಚ್.	ಪಿಹೆಚ್.ಡಿ.	ಪರಿಶಿಷ್ಟ ಪಂಗಡ	೯೯೦೨೮೩೧೮೯೩	೧೧೩೦/ ೧೭.೦೯.೨೦೧೨	ವಸತಿ ನಿಲಯದಲ್ಲಿದ್ದಾರೆ	ಮಾಸಿಕ ಆರ್ಥಿಕ ನೆರವು
೮	ಮಂಜಣ್ಣ. ಪಿ.ಬಿ.	ಪಿಹೆಚ್.ಡಿ.	ಪರಿಶಿಷ್ಟ ಪಂಗಡ	೯೪೮೩೯೫೫೯೯೭	೧೦೩೫/ ೦೮.೦೮.೨೦೧೧	ಇಲ್ಲ	ಆರ್.ಜಿ.ಎನ್.ಎಫ್. (ಎಸ್.ಆರ್.ಎಫ್)

ಮಹಿಳಾ ಅಧ್ಯಯನ ವಿಭಾಗ

ಕ್ರ.ಸಂ.	ವಿದ್ಯಾರ್ಥಿ ಹೆಸರು	ಕೋರ್ಸ್ ಪಿಎಚ್.ಡಿ./ಎಂ.ಫಿಲ್/ಎಂ.ವಿ.ಎ./ ಎಂ.ಮ್ಯೂಜಿಕ್/ಬಿ.ಮ್ಯೂಜಿಕ್/ ಎಂ.ಎ.ಪಿಎಚ್.ಡಿ.	ಜಾತಿ ಪಜಾ/ ಪಪಂ	ವಿದ್ಯಾರ್ಥಿಗಳ ದೂರವಾಣಿ ಸಂಖ್ಯೆ	ನೋಂದಣಿ ಸಂಖ್ಯೆ ಮತ್ತು ವರ್ಷ	ವಸತಿ ನಿಲಯದಲ್ಲಿ ಇದ್ದಾನೋ/ ಳೋ ಇಲ್ಲವೋ	ಪಡೆಯುತ್ತಿರುವ ಶಿಷ್ಯವೇತನದ ವಿವರ ಮಾಸಿಕ ಆರ್ಥಿಕ ನೆರವು/ಜೆ.ಆರ್.ಎಫ್/ ಆರ್.ಜಿ.ಎನ್. ಎಫ್/ ಐ.ಸಿ.ಹೆಚ್.ಆರ್/ ಐ.ಸಿ.ಎಸ್.ಎಸ್.ಆರ್
೦೧.	ಪಂಪಾಪತಿ ಎನ್.ಎಲ್.	ಪಿಎಚ್.ಡಿ.	ಪಪಂ			ಇಲ್ಲ	ಆರ್.ಜಿ.ಎನ್.ಎಫ್.

೦೨.	ಹನುಮೇಶ	ಪಿಎಚ್.ಡಿ.	ಪಪಂ			ಇಲ್ಲ	ಆರ್.ಜಿ.ಎನ್.ಎಫ್.
೦೩.	ಸಂದ್ಯಾ ಎಚ್.ಎಸ್.	ಪಿಎಚ್.ಡಿ.	ಪಜಾ			ಇದ್ದಾರೆ	ಮಾಸಿಕ ಆರ್ಥಿಕ ನೆರವು

೧೧. ೨೦೧೫–೧೬ನೇ ಸಾಲಿನ ಪ.ಜಾ.,ಪ.ಪಂ ವಿದ್ಯಾರ್ಥಿ ವೇತನ

೧. ಹಾಸ್ಟೆಲ್ ಸ್ಕಾಲರ್‌ಶಿಪ್, ಡೇ ಸ್ಕಾಲರ್‌ಶಿಪ್ ಮಂಜೂರಾತಿ ಮೊತ್ತ
(ಹಾಸ್ಟೆಲ್ ಸ್ಕಾಲರ್ ಹಾಸ್ಟೆಲ್ ನಿರ್ವಹಣೆ ಹೋಗಿ ಶುಲ್ಕಮರುಪಾವತಿ ಮಂಜೂರಾಗುತ್ತದೆ)

೨. ನಗದು ಬಹುಮಾನ ಇಲ್ಲ
೩. ಶುಲ್ಕಮರುಪಾವತಿ ರೂ. ೩,೬೩,೩೨೫.೦೦
೪. ಪ್ರವಾಸ ಧನ ಸಹಾಯ ಇಲ್ಲ
೫. ಎಂ.ಫಿಲ್. ದನ ಸಹಾಯ ರೂ. ೧,೩೬,೦೦೦.೦೦
೬. ಪಿಎಚ್.ಡಿ. ದನ ಸಹಾಯ ರೂ. ೧,೪೮೦೦೦.೦೦
೭. ಇತರೆ(ಪಟ್ಟಣ ಪಂಚಾಯತಿ ಮತ್ತು ಪುರಸಭೆ) ರೂ. ೪೨,೬೫೦.೦೦

೧೨. ಪ.ಜಾ./ಪ.ಪಂ. ವರ್ಗಗಳ ವಿಶೇಷ ಘಟಕದ ಸ್ಥಾಯಿ ಸಮಿತಿ ಪಟ್ಟಿ

೧. ಮಾನ್ಯ ಕುಲಪತಿಗಳು, ಅಧ್ಯಕ್ಷರು, ಕವಿಹಂ
೨. ಮಾನ್ಯ ಕುಲಸಚಿವರು, ಸದಸ್ಯರು, ಕವಿಹಂ
೩. ಮಾನ್ಯ ಡೀನ್, ಭಾಷಾ ನಿಕಾಯ, ಸದಸ್ಯರು, ಕವಿಹಂ
೪. ಮಾನ್ಯ ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಸದಸ್ಯರು, ಕವಿಹಂ
೫. ಮಾನ್ಯ ಡೀನ್, ಲಲಿತಕಲೆಗಳ ನಿಕಾಯ, ಸದಸ್ಯರು, ಕವಿಹಂ
೬. ಮಾನ್ಯ ನಿರ್ದೇಶಕರು, ಅಧ್ಯಯನಾಂಗ, ಸದಸ್ಯರು, ಕವಿಹಂ
೭. ಮಾನ್ಯ ಹಣಕಾಸು ಅಧಿಕಾರಿಗಳು, ಸದಸ್ಯರು, ಕವಿಹಂ
೮. ಮಾನ್ಯ ಉಪಕುಲಸಚಿವರು(ಆಡಳಿತ), ಸದಸ್ಯರು, ಕವಿಹಂ
೯. ಮಾನ್ಯ ಸಂಯೋಜನಾಧಿಕಾರಿಗಳು, ಸದಸ್ಯ ಸಂಚಾಲಕರು, ಕವಿಹಂ

❑❑❑

೨೮. ನುಡಿಹಬ್ಬ–೨೪ (ಘಟಿಕೋತ್ಸವ)

ಕನ್ನಡ ವಿಶ್ವವಿದ್ಯಾಲಯವು ತನ್ನ ಘಟಿಕೋತ್ಸವವನ್ನು ಸಾಂಸ್ಕೃತಿಕ ಹಬ್ಬವನ್ನಾಗಿ ಆಚರಿಸುತ್ತದೆ. ನುಡಿಹಬ್ಬ ಎಂದೇ ಅದನ್ನು ಕರೆಯಲಾಗುತ್ತದೆ. ನುಡಿಹಬ್ಬದ ವಿಶೇಷತೆ ಎಂದರೆ ಕನ್ನಡ ನಾಡು, ನುಡಿ, ಸಂಸ್ಕೃತಿಯ ವಿಸ್ತರಣೆ, ಏಳಿಗೆಗಾಗಿ ಶ್ರಮಿಸಿದ ಮಹಾನ್ ಪ್ರತಿಭೆಗಳನ್ನು ಗುರುತಿಸುವುದು ಮತ್ತು ಅವರಿಗೆ **ನಾಡೋಜ** ಎಂಬ ಪ್ರತಿಷ್ಠಿತ ಪದವಿಯನ್ನು ಪ್ರದಾನ ಮಾಡುವುದು. ಕನ್ನಡ ನಾಡು ನುಡಿ, ಸಂಸ್ಕೃತಿಯ ಜೊತೆ ಸಾತತ್ಯ ಕಲ್ಪಿಸಲೆಂದು ಆಂಗ್ಲ ಚಿಂತನೆಯ ಫಲಿತಾಂಶ ಡಾಕ್ಟರೇಟ್ ಕಲ್ಪನೆ ಕೈ ಬಿಟ್ಟು ಆದಿಕವಿ ಪಂಪನ ಬಿರುದಾದ **ನಾಡೋಜ** ಪದವಿ ಮೂಲಕ ನಾಡಿನ ಶ್ರೇಷ್ಠರನ್ನು ಗೌರವಿಸುವ ಈ ವಿಧಾನ ನಮ್ಮತನವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿರುವ ಗಟ್ಟಿ ಹೆಜ್ಜೆ.

೧೦ನೇ ಮಾರ್ಚ್ ೨೦೧೬ರ ಗುರುವಾರ ಕನ್ನಡ ವಿಶ್ವವಿದ್ಯಾಲಯ ೨೪ನೇ ನುಡಿಹಬ್ಬವನ್ನು ಸಂಭ್ರಮದಿಂದ ಆಚರಿಸಿತು. ಡಿ.ಲಿಟ್., ಪಿಎಚ್.ಡಿ. ಇನ್ನಿತರ ಪದವಿ ಪ್ರದಾನ ಕಾರ್ಯಕ್ರಮ ಶಿಸ್ತಿನಿಂದ ಶಾಂತಿಯುತವಾಗಿ ನಡೆಯಿತು.

ಸಂಜೆ ೫.೩೦.ಗಂಟೆಗೆ ಸರಿಯಾಗಿ ಕನ್ನಡ ವಿಶ್ವವಿದ್ಯಾಲಯದ ಬಯಲು ರಂಗಮಂದಿರದಲ್ಲಿ ಘಟಿಕೋತ್ಸವ ಸಮಾರಂಭ ಜರುಗಿತು. ಪೂರ್ಣಕುಂಭ ವಾದ್ಯ ಮೇಳದೊಂದಿಗೆ ಮೆರವಣಿಗೆಯಲ್ಲಿ ಗಣ್ಯರೆಲ್ಲ ವೇದಿಕೆಗೆ ಆಗಮಿಸಿದರು. ಘಟಿಕೋತ್ಸವದ ಅಧ್ಯಕ್ಷತೆ ವಹಿಸಿದ್ದ ಕುಲಾಧಿಪತಿಗಳೂ ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರೂ ಆಗಿರುವ **ಸನ್ಮಾನ್ಯ ಶ್ರೀ ವಜುಭಾಯಿ ರೂಢಾಬಾಯಿ ವಾಲಾ** ಅವರು ಹಾಗೂ ರಾಜ್ಯದ ಉನ್ನತ ಶಿಕ್ಷಣ ಸಚಿವರೂ, ಸಮಕುಲಾಧಿಪತಿಗಳೂ ಆದ ಸನ್ಮಾನ್ಯ **ಶ್ರೀ ಟಿ.ಬಿ.ಜಯಚಂದ್ರ** ಅವರು ಮೆರವಣಿಗೆಯ ಮೂಲಕ ವೇದಿಕೆಗೆ ಆಗಮಿಸಿದರು. ನಾಡಗೀತೆ, ರಾಷ್ಟ್ರಗೀತೆ ನಂತರ ಮಾತೆಂಬುದು ಜ್ಯೋತಿರ್ಲಿಂಗ ಪ್ರಾರ್ಥನ ಗೀತೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಘನತೆವೆತ್ತ ರಾಜ್ಯಪಾಲರು ಘಟಿಕೋತ್ಸವಕ್ಕೆ ಚಾಲನೆ ನೀಡಿದರು. ಕನ್ನಡ ವಿಶ್ವವಿದ್ಯಾಲಯದ ಮಾನ್ಯಕುಲಪತಿಯವರಾದ **ಡಾ.ಮಲ್ಲಿಕಾ ಎಸ್. ಘಂಟಿ** ಅವರು ಎಲ್ಲರನ್ನು ಘಟಿಕೋತ್ಸವಕ್ಕೆ ಸ್ವಾಗತಿಸಿ ಸ್ವಾಗತ ಭಾಷಣ ಮಾಡಿದರು. ವಿಶ್ವವಿದ್ಯಾಲಯದ ವರ್ಷದ ಶೈಕ್ಷಣಿಕ ಸಾಲಿನಲ್ಲಿ ನಡೆಸಿದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ವಿವರಿಸಿದರು.

ಘನತೆವೆತ್ತ ರಾಜ್ಯಪಾಲರು ಘಟಿಕೋತ್ಸವ ಭಾಷಣ ಮಾಡಲು ಮತ್ತು ಪದವಿಗಳನ್ನು ಪ್ರದಾನ ಮಾಡಲು ಸಮ್ಮತಿ ನೀಡಿದರು. ನಂತರ ಡಿ.ಲಿಟ್., ಪಿಎಚ್.ಡಿ., ಎಂ.ಫಿಲ್. ಪದವಿಗಳನ್ನು ಪ್ರದಾನ ಮಾಡಿದರು. ಪದವಿ ಪಡೆದ ಸಂಶೋಧಕರಿಗೆ ಕುಲಪತಿಯವರು ಪ್ರಮಾಣ ವಚನ ಬೋಧಿಸಿದರು.

ಹೆಸರಾಂತ ವಿದ್ವಾಂಸರು, ನವದೆಹಲಿಯ ಜವಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕರು ಆಗಿರುವ ಡಾ.ಪುರುಷೋತ್ತಮ ಬಿಳಿಮಲೆ ಅವರು ನುಡಿಹಬ್ಬ(ಘಟಿಕೋತ್ಸವ)ದ ಭಾಷಣ ಮಾಡಿದರು. ಸನ್ಮಾನ್ಯ ರಾಜ್ಯಪಾಲರು ಘಟಿಕೋತ್ಸವದ ಮುಕ್ತಾಯವನ್ನು ಘೋಷಿಸಿದರು.

ವೇದಿಕೆಯಲ್ಲಿ ಕುಲಸಚಿವರಾದ ಡಾ. ಡಿ. ಪಾಂಡುರಂಗಬಾಬು, ನಿಕಾಯಗಳ ಡೀನರಾದ ಡಾ. ಮೋಹನ್ ಕುಂಟಾರ, ಡಾ. ಮಂಜುನಾಥ ಬೇವಿನಕಟ್ಟಿ, ಡಾ. ಹನುಮಣ್ಣನಾಯಕ ದೊರೆ, ಅಧ್ಯಯನಾಂಗದ ನಿರ್ದೇಶಕರಾದ ಡಾ. ಕೆ. ರವೀಂದ್ರನಾಥ, ಹಣಕಾಸು ಅಧಿಕಾರಿಗಳಾದ ಡಾ.ಪಿ. ಮಹಾದೇವಯ್ಯ ಅವರು ಉಪಸ್ಥಿತರಿದ್ದರು.

ನುಡಿಹಬ್ಬ–೨೪
ಘಟಿಕೋತ್ಸವ ಭಾಷಣ – ಡಾ. ಪುರುಷೋತ್ತಮ ಬಿಳಿಮಲೆ

ಕರ್ನಾಟಕದ ಘನತೆವೆತ್ತ ರಾಜ್ಯಪಾಲರೂ ಕನ್ನಡ ವಿಶ್ವವಿದ್ಯಾಲಯದ ಕುಲಾಧಿಪತಿಗಳೂ ಆಗಿರುವ ಸನ್ಮಾನ್ಯ ಶ್ರೀ ವಜುಭಾಯಿ ರೂಡಾಭಾಯಿ ವಾಲಾ ಅವರೇ, ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರೂ ವಿಶ್ವವಿದ್ಯಾಲಯದ ಸಮಕುಲಾಧಿಪತಿ ಗಳೂ ಆದ ಸನ್ಮಾನ್ಯ ಶ್ರೀ ಟಿ.ಬಿ. ಜಯಚಂದ್ರ ಅವರೇ, ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಮಲ್ಲಿಕಾ. ಎಸ್. ಘಂಟಿ ಅವರೇ, ಕುಲಸಚಿವರಾದ ಡಾ. ಡಿ. ಪಾಂಡುರಂಗ ಬಾಬು ಅವರೇ, ಸಿಂಡಿಕೇಟ್ ಮತ್ತು ಶೈಕ್ಷಣಿಕ ಪರಿಷತ್ತಿನ ಸದಸ್ಯರೇ, ವಿವಿಧ ನಿಕಾಯಗಳ ಡೀನರುಗಳೇ, ವಿಶ್ವವಿದ್ಯಾಲಯದ ಎಲ್ಲ ಉದ್ಯೋಗಿಗಳೇ, ಮಾಧ್ಯಮದ ಪ್ರತಿನಿಧಿಗಳೇ ಮತ್ತು ಎಲ್ಲ ಕನ್ನಡ ಬಂಧುಗಳೇ,

ಮೊದಲಿಗೆ, ಈ ನುಡಿಹಬ್ಬದಲ್ಲಿ ವಿವಿಧ ಪದವಿಗಳನ್ನು ಸ್ವೀಕರಿಸುತ್ತಿರುವ ಎಲ್ಲ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮತ್ತು ಸಂಶೋಧಕರಿಗೆ ಅಭಿನಂದನೆಗಳು. ಹಾಗೆಯೇ ನಾಡೋಜ ಪ್ರಶಸ್ತಿಗೆ ಭಾಜನರಾದ ಮಹನೀಯರಿಗೆ ಅಭಿವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ತಮ್ಮ ಮಾರ್ಗದರ್ಶನದಲ್ಲಿ ಕನ್ನಡ ಮತ್ತು ಕರ್ನಾಟಕ ಇನ್ನಷ್ಟು ಆರೋಗ್ಯಕರವಾಗಿ ಬೆಳೆಯಲಿ ಎಂದು ಪ್ರಾಮಾಣಿಕವಾಗಿ ಆಶಿಸುತ್ತೇನೆ.

ನಾನು ಇಲ್ಲಿ ಕೆಲವು ಮಾತುಗಳನ್ನು ಹೇಳುವ ಹೊತ್ತಿಗೆ ಕನ್ನಡ ವಿಶ್ವವಿದ್ಯಾಲಯವು ಬೆಳ್ಳಿಹಬ್ಬದ ಹೊಸ್ತಿಲಲ್ಲಿ ಬಂದು ನಿಂತಿದೆ. ಕಳೆದ ೨೩ ವರ್ಷಗಳಲ್ಲಿ ಇಲ್ಲಿ ನಡೆದ ನುಡಿಹಬ್ಬಗಳಲ್ಲಿ ಅನೇಕ ಮಹನೀಯರುಗಳು ಕನ್ನಡ ಭಾಷೆಯ ಅಭಿವೃದ್ಧಿ ಮತ್ತು ವಿಸ್ತರಣೆಯ ಬಗೆಗೆ ಅತ್ಯಂತ ಮೌಲಿಕವಾದ ಮಾತುಗಳನ್ನು ಹೇಳಿದ್ದಾರೆ. ಅವು ನಮ್ಮ ಕನ್ನಡಪರ ಚಿಂತನಾಕ್ರಮಗಳ ಶಕ್ತಿಯನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿವೆ. ಇಲ್ಲಿ ಇದುವರೆಗೆ ಅತಿಥಿಗಳಾಗಿ ಭಾಗವಹಿಸಿದ ಹಿರಿಯ ವಿದ್ವಾಂಸರು ನಮ್ಮ ಅಧ್ಯಯನ ಕ್ರಮದ ವಿಭಿನ್ನ ಶಿಸ್ತುಗಳಿಗೆ ಸೇರಿದ್ದಾರೆ. ಅವರೆಲ್ಲರೂ ಕನ್ನಡ ವಿಶ್ವವಿದ್ಯಾಲಯದ ಅಪೂರ್ವ ಸಾಧನೆಗಳ ಬಗ್ಗೆ ಬೆಳಕು ಚೆಲ್ಲಿರುವರಲ್ಲದೆ, ಅದು ಮುಂದೆ ಮಾಡಬೇಕಾದ ಕೆಲವು ಕೆಲಸಗಳ ಬಗ್ಗೆಯೂ ಮುನ್ಸೂಚನೆಗಳನ್ನು ನೀಡಿದ್ದಾರೆ. ಈ ಸಲಹೆಗಳಲ್ಲಿ ವಿಶ್ವವಿದ್ಯಾಲಯ ಎಷ್ಟನ್ನು ಅಂಗೀಕರಿಸಿದೆ, ಎಷ್ಟನ್ನು ನಿರಾಕರಿಸಿದೆ ಮತ್ತು ಎಷ್ಟನ್ನು ನಿರ್ಲಕ್ಷಿಸಿದೆ ಎಂಬುದನ್ನು ವಿಶ್ವವಿದ್ಯಾಲಯದ ಬೆಳ್ಳಿಹಬ್ಬದ ಸಂದರ್ಭದಲ್ಲಿ ಒಂದು ವಿಶ್ಲೇಷಣೆಗೆ ಒಳಪಡಿಸಲು ಸಾಧ್ಯವಾದರೆ ಅದರಿಂದ ತುಂಬಾ ಪ್ರಯೋಜನವಾದೀತು.

೧೯೯೨ರಲ್ಲಿ ಈ ವಿಶ್ವವಿದ್ಯಾಲಯ ಆರಂಭಗೊಂಡಾಗ ಇಲ್ಲಿದ್ದದ್ದು ಬೆಣಚುಕಲ್ಲಿನ ಬೋಳುಗುಡ್ಡ ಮತ್ತು ನೀಲಿ ಪರದೆ ಹಾಸಿಕೊಂಡ ಕಮಲಾಪುರ ಕೆರೆ. ಆದರೆ ಈಗ ಈ ಕೆರೆಯಿಂದ ಸಾಕಷ್ಟು ನೀರು ಹರಿದಿದೆ. ಬೋಳುಗುಡ್ಡದ ಬೆಣಚುಕಲ್ಲುಗಳು ಹಸನಾದ ಕನಸುಗಳನ್ನು ಬಿತ್ತುತ್ತಾ ಹಸಿರು ಗಿಡಮರಗಳಿಗೆ ಆಸರೆ ನೀಡಿ ನಮ್ಮನ್ನು ಇಲ್ಲಿಯವರೆಗೆ ಕರೆದುತಂದಿದೆ. ಈ ನಡಿಗೆಯನ್ನು ಹತ್ತಿರದಿಂದ ಮತ್ತು ದೂರದಿಂದ, ಒಳಗಿನಿಂದ ಮತ್ತು ಹೊರಗಿನಿಂದ ಕಂಡವನು ನಾನು. ಹೀಗೆ ಈ ವಿಶ್ವವಿದ್ಯಾಲಯದ ಭಾಗವಾಗಿ ಬೆಳೆದ ನನ್ನನ್ನು ಇಲ್ಲಿಗೆ ಈಗ ಅತಿಥಿಯಾಗಿ ಕರೆದಿದ್ದೀರಿ. ಇದನ್ನು ಒಂದು ದೊಡ್ಡ ಗೌರವ ಎಂದು ನಾನು ಭಾವಿಸುತ್ತೇನೆ. ಆದರೆ ಇದು ಒಂದು ಬಗೆಯ ಕಷ್ಟವನ್ನೂ ತಂದುಕೊಟ್ಟಿದೆ. ಜೊತೆಗೆ ಓಡಾಡಿದ ಜನಗಳ ಮುಂದೆಯೇ ಅತಿಥಿಯಾಗಿ ಮಾತಾಡುವುದು ಸುಲಭವಲ್ಲ. ಈ ಸಂಕೋಚದಲ್ಲಿ ಕನ್ನಡ ಸಂಶೋಧನೆಗೆ ಸಂಬಂಧಿಸಿದಂತೆ ಕೇವಲ ಎರಡು ವಿಷಯಗಳನ್ನು ತಮ್ಮೊಡನೆ ಹಂಚಿಕೊಳ್ಳಬಯಸುತ್ತೇನೆ.

೧. ಸಂಶೋಧಕರ ಮುಂದಿರುವ ಆತಂಕಗಳು, ಅಪಾಯಗಳು ಮತ್ತು ಸವಾಲುಗಳು

ಈ ವಿಶ್ವವಿದ್ಯಾಲಯನ್ನು ಸಂಶೋಧನೆಗಾಗಿಯೇ ಕಟ್ಟಲಾಯಿತು. 'ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಉನ್ನತ ಮಟ್ಟದ ಸಂಶೋಧನಾ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು ಇದರ ಗುರಿ' ಎಂದು ಮೊದಲಿನಿಂದಲೂ ಹೇಳುತ್ತಾ ಬರಲಾಗಿದೆ. ಈ ಗುರಿ ಸಾಧನೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಬಹುತೇಕ ಯಶಸ್ವಿಯಾಗಿದೆ. ದೇಸಿ ಚಿಂತನಾಕ್ರಮವೊಂದನ್ನು ಕಟ್ಟಲು ಬೇಕಾದ

ಮೂಲಸಾಮಗ್ರಿಗಳನ್ನು ಇಲ್ಲಿನ ಅನೇಕ ಸಂಶೋಧಕರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಜೊತೆಗೆ ಇತಿಹಾಸ, ಶಾಸನ, ಹಸ್ತಪ್ರತಿ, ಗ್ರಂಥಸಂಪಾದನೆ, ಜಾನಪದ, ಛಂದಸ್ಸು, ಸ್ಥಳನಾಮ ಮೊದಲಾದ ಕನ್ನಡದ ಮಾಹಿತಿಗಳ ಮೂಲಕವೇ ಕನ್ನಡವನ್ನು ಕಟ್ಟಿದ ಅಪ್ರತಿಮ ಸಂಶೋಧಕ ಡಾ. ಎಂ.ಎಂ. ಕಲಬುರ್ಗಿ ಅವರಂಥವರು ಇಲ್ಲಿ ಕುಲಪತಿಗಳಾಗಿ ಕೆಲಸ ಮಾಡಿದ್ದಾರೆ. ಅವರು ಬರೆದ ಸಾವಿರಕ್ಕೂ ಹೆಚ್ಚು ಲೇಖನಗಳು ಮತ್ತು ನೂರಕ್ಕೂ ಹೆಚ್ಚು ಕೃತಿಗಳು ಕನ್ನಡ ಸಂಶೋಧಕನೊಬ್ಬನ ಚರಮಸಿದ್ಧಿಯ ಹಾಗೆ ಭಾಸವಾಗುತ್ತದೆ. ಆದರೆ ಇಂದು ಪರಿಸ್ಥಿತಿ ಬದಲಾಗುತ್ತಿರುವಂತೆ ತೋರುತ್ತಿದೆ. ಕಲಬುರ್ಗಿಯವರು ತಮ್ಮ ಸಂಶೋಧನೆಯ ಸತ್ಯಗಳಿಂದಾಗಿಯೇ ಅಮಾನುಷವಾಗಿ ಕೊಲೆಯಾದರು. ಸಂಶೋಧಕ ಆಗಾಗ ಶಿಲುಬೆಗೇರಬೇಕಾಗುತ್ತದೆ ಎಂಬ ಅವರ ಮಾತು ಅವರಲ್ಲಿಯೇ ನಿಜವಾಯಿತು. ಕೊಲೆಗಾರರನ್ನು ಇವತ್ತಿನವರೆಗೆ ಸರಕಾರಕ್ಕೆ ಹಿಡಿಯಲಾಗಿಲ್ಲ. ಅಂದರೆ ಸಂಶೋಧಕರು ಇಂದು ತಮ್ಮ ಓದಿನಲ್ಲಿ ಕಂಡುಕೊಂಡ ಅಥವಾ ಕ್ಷೇತ್ರಕಾರ್ಯದಲ್ಲಿ ತಾವು ಸಂಗ್ರಹಿಸಿದ ಮಾಹಿತಿಗಳ ಆಧಾರದ ಮೇಲೆ ತಮ್ಮ ಸಂಶೋಧನೆಯನ್ನು ಮುಂದುವರಿಸುವುದು ಕಷ್ಟವಾಗುತ್ತಿದೆ. ಬದಲು ಸಮಕಾಲೀನ ಸಮಾಜ ಏನನ್ನು ನಿರೀಕ್ಷಿಸುತ್ತದೆಯೋ ಅದನ್ನೇ ಹೇಳಬೇಕಾಗಿರುವ ಒತ್ತಡದಲ್ಲಿ ನಾವು ಸಿಲುಕಿದ್ದೇವೆ. ಟಿಪ್ಪು ಸುಲ್ತಾನನ ಲಾವಣಿಯೊಂದರಲ್ಲಿ ಬರುವ-

'ಟೀಪು ರಾಜ್ಯದೊಳು ಶರಾಬು, ಶೇಂದಿ, ಗಾಂಜಾ ಅಫೀಮು ಇರಲಿಲ್ಲ,
ಟೀಪುವಿನ ಕಾಲದೊಳು ಜೂಜಿನಾಟ ಮೇಣ್ ವ್ಯಭಿಚಾರದ ಸುಳಿವಿಲ್ಲ'

ಎಂಬ ಸಾಲುಗಳನ್ನು ಉದ್ಧರಿಸಿದ್ದಕ್ಕೆ ನಾನು ಅನೇಕ ಕೆಟ್ಟ ಮತ್ತು ಅಶ್ಲೀಲ ಮಾತುಗಳನ್ನು ಕೇಳಬೇಕಾಯಿತು. ಪಂಡರಾಪುರ ವಿಠ್ಠಲನು ವಲಸೆಗಾರ ಪಶುಪಾಲಕರ ದೈವ ವಾಗಿರುವ ಸಾಧ್ಯತೆ ಇದೆ ಎಂಬ ಮಾತನ್ನು ಬರೆದದ್ದಕ್ಕೆ ನಾನು ಸಾಕಷ್ಟು ತೊಂದರೆ ಅನುಭವಿಸಬೇಕಾಯಿತು. 'ದೇವನಹಳ್ಳಿಯಲ್ಲಿ ಟಿಪ್ಪು ಹುಟ್ಟಿದ್ದರಿಂದ ಅವನ ಹೆಸರನ್ನು ವಿಮಾನ ನಿಲ್ದಾಣಕ್ಕೆ ಇಡಬಹುದಾಗಿತ್ತು' ಎಂಬ ಒಂದು ಸಣ್ಣ ಅಭಿಪ್ರಾಯವನ್ನು ಗಿರೀಶ್ ಕಾರ್ನಾಡರು ವ್ಯಕ್ತಪಡಿಸಿದ್ದೇ ದೊಡ್ಡ ಅಪರಾಧವಾಗಿ ಅನೇಕರಿಗೆ ಕಂಡು ಅವರು ಬಹಿರಂಗವಾಗಿ ಕ್ಷಮೆ ಯಾಚಿಸಬೇಕಾಯಿತು. ಕರ್ನಾಟಕವೂ ಸೇರಿದಂತೆ, ಈ ದೇಶದ ಸುದೀರ್ಘ ಇತಿಹಾಸದಲ್ಲಿ ಇಲ್ಲಿಗೆ ವಲಸೆ ಬಂದು ನೆಲೆಸಿದ ಜನಾಂಗಗಳ ಮತ್ತು ಸಮುದಾಯಗಳ ಲೆಕ್ಕ ಇಟ್ಟವರಿಲ್ಲ. ಒಂದು ಬಗೆಯ ನಿರಂತರತೆಯನ್ನು ಸದಾ ಕಾಪಾಡುತ್ತಲೇ, ಜೊತೆಜೊತೆಗೆ ಬದಲಾಗುತ್ತಾ ಹೋಗಿರುವ ಈ ನೆಲವು, ಬಗೆಬಗೆಯ ಸಂಸ್ಕೃತಿಗಳನ್ನು ಉದಾರವಾಗಿ ಸ್ವೀಕರಿಸಿ ಬೆಳೆಯಲು ಅನುವು ಮಾಡಿ ಕೊಟ್ಟಿದೆ. ಈ ಹಂತದಲ್ಲಿ ನಡೆದ ಹೊಸ ಆವಿಷ್ಕಾರಗಳು, ಸೇರ್ಪಡೆಗಳು, ನಿರಾಕರಣೆಗಳು, ಸಂಘರ್ಷಗಳು ಮತ್ತು ಸಮನ್ವಯಗಳು ನಮ್ಮ ದೇಶವನ್ನು ಇತರ ದೇಶಗಳಿಂದ ಬೇರೆಯಾಗಿಸಿದೆ. ಜಗತ್ತಿನ ಮೂಲೆಮೂಲೆಗಳಿಂದ ಇಲ್ಲಿಗೆ ಬೌದ್ಧಿಕತೆ ಹರಿದು ಬಂದಿದೆ, ಭೌತಿಕ ಸಾಮಗ್ರಿಗಳು ಸಾಗಿಬಂದಿವೆ. ಅವು ಕಾಲಾಂತರದಲ್ಲಿ ಇಲ್ಲಿಯವರಿಗೆ ಗೊತ್ತಾಗದ ಹಾಗೆ ಇಲ್ಲಿಯವೇ ಆಗಿವೆ. ಇಂದು ಕರ್ನಾಟಕ ಸಂಗೀತದ ಮೂಲದ್ರವ್ಯವಾಗಿರುವ ವಯೋಲಿನ್ ಮಧ್ಯ ಏಷಿಯಾದಿಂದ ಇಲ್ಲಿಗೆ ಆಗಮಿಸಿದೆ. ಜನಪದ ಸಂಗೀತದ ಅದರಲ್ಲೂ ಭಾರತದ ದಲಿತರ ಸುಖ ದುಃಖಗಳ ಭಾಗವಾಗಿರುವ ದಪ್ಪು ಕೂಡಾ ಮೂಲತಃ ನಮ್ಮದಲ್ಲ. ಇಂಥ ಘಟನೆಗಳು ನಮಗೆ ಸಹನೆಯನ್ನು ಹೇಳಿಕೊಟ್ಟಿದೆ. ಈ ನೆಲದಲ್ಲಿ ನಡೆದ ಬಹುದೊಡ್ಡ ಸಂವಾದಗಳು ಇಂದು ನಮ್ಮ ಪ್ರಜಾಪ್ರಭುತ್ವದ ತಳಹದಿಯಾಗಿ ಕೆಲಸ ನಿರ್ವಹಿಸುತ್ತಿದೆ. ಕ್ಷಮೆಯನ್ನು ಧರ್ಮದ ೧೦ ಲಕ್ಷಣಗಳಲ್ಲಿ(ಕ್ಷಮಾ ದಮೋ ಆಸ್ತೇಯಂ..) ಒಂದು ಎಂದು ಪ್ರಾಚೀನ ಹಿಂದೂಗಳು ನಂಬಿದ್ದರು. ಆದರೆ ಈಗ ಏನನ್ನು ಹೇಳಿದರೆ ನಾನು ಅಪಾಯದಿಂದ ಪಾರಾಗಬಹುದು ಎಂದು ಎರಡೆರಡು ಬಾರಿ ಯೋಚಿಸಿ ಬರೆಯಬೇಕಾದ ಮತ್ತು ಮಾತಾಡಬೇಕಾದ ವಾತಾವರಣ ನಿರ್ಮಾಣವಾಗುತ್ತಿರುವಾಗ ನಮ್ಮ ಸಂಶೋಧನೆಗಳು ಪೇಲವವಾಗುವುದರಲ್ಲಿ ಅನುಮಾನವಿಲ್ಲ.

ಈ ಸಮಸ್ಯೆ ಇನ್ನೂ ಜಟಿಲವಾಗಿರುವುದು ಸಂಶೋಧನೆಗೆ ಜಾತಿ ಮತ್ತು ಸಮುದಾಯಗಳು ಗಟ್ಟಿಯಾಗಿ ಅಂಟಿಕೊಂಡಿರುವುದರಿಂದ. ಪಂಪ, ಬಸವಣ್ಣ, ಕನಕದಾಸ, ಕುವೆಂಪು, ಸಂಗೊಳ್ಳಿ ರಾಯಣ್ಣ , ಕೆಂಪೇಗೌಡ ಮೊದಲಾದ ಇತಿಹಾಸ ಪ್ರಸಿದ್ಧರು, ಎಲ್ಲ ಕನ್ನಡಿಗರ ಸೊತ್ತಾಗಿ ಬೆಳೆಯಬೇಕಾಗಿತ್ತು. ಆದರೆ ಅವರೆಲ್ಲ ಇಂದು ಒಂದೊಂದು ಸಮುದಾಯಗಳಿಗೆ ಸೀಮಿತವಾಗಿ ಕಾಣಿಸಿಕೊಳ್ಳುತ್ತಿದ್ದಾರೆ ಮತ್ತು ನಿರೀಕ್ಷೆಗೂ ಮೀರಿ ಎಲ್ಲ ಬಗೆಯ ವಿಮರ್ಶೆಗಳ ಗಡಿ ದಾಟಿ ಬೆಳೆದು ನಿಲ್ಲುತ್ತಿದ್ದಾರೆ. ಕರ್ನಾಟಕದ ಅನೇಕ ಚಾರಿತ್ರಿಕ ಘಟನೆಗಳನ್ನು, ಇತಿಹಾಸ ನಿರ್ಮಾಪಕರನ್ನು ಮತ್ತು ಸಾಹಿತಿಗಳನ್ನು ಜಾತಿಯ ಕಬಂಧಬಾಹುಗಳಿಂದ ಬಿಡಿಸದೇ ಹೋದರೆ ಯಾವ ಬಗೆಯ ಚರ್ಚೆಯೂ ಸಾಧ್ಯವಿಲ್ಲ, ಸಂಶೋಧನೆಯೂ ಸಾಧ್ಯವಿಲ್ಲ. ಈ ಮಾತು ಅನೇಕ ಜನಪದ ಕಲೆಗಳಿಗೂ ಅನ್ವಯವಾಗುತ್ತದೆ. ಯಕ್ಷಗಾನದಂಥ ಜನಪ್ರಿಯ ಕಲೆಯಲ್ಲಿ ವಿದೂಷಕನಿಗಿದ್ದ ಮುಕ್ತ

ಅವಕಾಶ ಈಗ ಸಂಕುಚಿತವಾಗಿಬಿಟ್ಟಿದೆ. ಅರಸರನ್ನೂ, ದೇವಾನುದೇವತೆಗಳನ್ನೂ, ಋಷಿಗಳನ್ನೂ ರಂಗದ ಮೇಲೆ ಎಗ್ಗಿಲ್ಲದೆ ಹಾಸ್ಯ ಮಾಡುವ ಅವಕಾಶ ಸಂಸ್ಕೃತ ರಂಗಭೂಮಿಯಿಂದ ತೊಡಗಿ ಜನಪದ ರಂಗಭೂಮಿಯವರೆಗೆ ವಿದೂಷಕನಿಗೆ ಮೊದಲಿನಿಂದಲೂ ಇತ್ತು. ಆದರೆ ಈಗ ಇಲ್ಲ ಅಥವಾ ಅಂಥ ಅವಕಾಶ ಕಡಿಮೆಯಾಗಿದೆ. ಪ್ರಜಾಪ್ರಭುತ್ವದ ಮೂಲ ಆಶಯಕ್ಕೆ ವಿರುದ್ಧವಾಗಿ ಕಲಾವಿದರ ಮುಕ್ತ ಅಭಿವ್ಯಕ್ತಿಗೆ ಈಗ ಅಂಕುಶ ಬಿದ್ದಿದೆ. ಇಂಥಲ್ಲಿ ಸೃಜನಶೀಲತೆ, ಸಂಶೋಧನೆ ಮತ್ತು ವಿಮರ್ಶೆ ಆರೋಗ್ಯಕರವಾಗಿ ಬೆಳೆಯುವುದು ಅಸಾಧ್ಯ. ಮಾರ್ಗ–೪ರಲ್ಲಿ ಕಲಬುರ್ಗಿಯವರು ಹೀಗೆ ಬರೆಯುತ್ತಾರೆ-

'ಇತ್ತೀಚೆಗೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ ರಾಜಕೀಯ-ಧಾರ್ಮಿಕ ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟು ಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಇತಿಹಾಸವನ್ನು ಮುಂದು ಮಾಡಿಕೊಂಡು ವರ್ತಮಾನ ವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ(ಮಾರ್ಗ-೪, ಮಾರ್ಗಕ್ಕೆ ಮೊದಲು, ೨೦೦೪).'

ಬಹುಶಃ ಕನ್ನಡ ಎಂದೂ ಇಂಥ ಪರಿಸ್ಥಿತಿಯನ್ನು ಇದಿರಿಸಿಲ್ಲ ಎಂಬ ಅಂಶವು ನಮ್ಮ ಆತಂಕವನ್ನು ಇನ್ನೂ ಹೆಚ್ಚು ಮಾಡುತ್ತಿದೆ.

ಅರಿಕೇಸರಿಯ ಆಸ್ಥಾನ ಕವಿಯಾಗಿದ್ದ ಪಂಪನಿಗೆ 'ಓಲಗಿಸಿ ಬಾಳ್ವುದು ಕಷ್ಟಂ ಇಳಾಧಿನಾಥರಾ' ಎಂದು ಹೇಳುವ ಧೈರ್ಯವಿತ್ತು. 'ಮೂರ್ಧಾಭಿಷಿಕ್ತರಾದ ಹಲವು ಅರಸರು ವಿಷಯ ಭೋಗಗಳಿಂದಾಗಿ ಮದೋನ್ಮತ್ತರಾಗಿ ತಮ್ಮಂ ಮರೆತು ಧರ್ಮವೆಂಬ ದೋಣಿಯಿಂದ ಜಾರಿ ಬೀಳುತ್ತಾರೆ' ಎಂದು ಅವನು ಕೆಂಡ ಕಾರುತ್ತಾನೆ. ಊರೆಲ್ಲಾ ತುಂಬಿಕೊಂಡಿರುವ ಬ್ರಹ್ಮಚಾರಿಗಳನ್ನು ಕಂಡ ಉರಿಲಿಂಗಪೆದ್ದಿಯು-'ಹೊನ್ನ ಬಿಟ್ಟು, ಹೆಣ್ಣ ಬಿಟ್ಟು, ಮಣ್ಣ ಬಿಟ್ಟು, ಬ್ರಹ್ಮಚಾರಿಗಳಾಗಬೇಕೆಂದು ಬಣ್ಣವಿಟ್ಟು ನುಡಿವ ಅಣ್ಣಗಳ ಪರಿಯ ನೋಡಿರೋ' ಎಂದು ಕೆಣಕುತ್ತಾನೆ. ಮಧ್ಯಕಾಲೀನ ಕರ್ನಾಟಕದ ವೈಭವದ ಅರಸೊತ್ತಿಗೆಯನ್ನು ಕಣ್ಣಾರೆ ಕಂಡ ಕುಮಾರವ್ಯಾಸನು 'ಅರಸು ರಾಕ್ಷಸ, ಮಂತ್ರಿಯೆಂಬುವ ಮೊರೆವ ಹುಲಿ, ಪರಿವಾರ ಹದ್ದಿನ ನೆರವಿ, ಬಡವರ ಬಿನ್ನಪವನಿನ್ನಾರು ಕೇಳುವರು, ಉರಿವುರಿವುತಿದೆ ದೇಶ, ನಾವಿನ್ನಿರಲು ಬಾರದು' ಎಂದು ಗುಡುಗಿದ್ದಲ್ಲದೆ, 'ಸಿರಿಯನುಳ್ಳವನೆ ಕುಲಜನು, ಸಿರಿಯನುಳ್ಳವನೇ ವಿದಗ್ಧನು, ಸಿರಿಯನುಳ್ಳವನೇ ಮಹಾತ್ಮನು ಸಕಲಗುಣಯುತನು' ಎಂದು ವ್ಯಂಗ್ಯ ವಾಡುತ್ತಾನೆ. ಹಂಪಿಯ ಅಪಾರ ಸಂಪತ್ತನ್ನು ತಾತ್ವಿಕವಾಗಿ ನಿರಾಕರಿಸುವ ಪುರಂದರದಾಸರು-

'ಲೊಳಲೊಟ್ಟೆ, ಎಲ್ಲಾ ಲೊಳಲೊಟ್ಟೆ,
ಆನೆಕುದುರೆ ಎಲ್ಲಾ ಲೊಳಲೊಟ್ಟೆ
ಸೇನೆ ಭಂಡಾರವು ಲೊಳಲೊಟ್ಟೆ
ಮುತ್ತು ಮಾಣಿಕ್ಯ ಲೊಳಲೊಟ್ಟೆ
ಛತ್ರಚಾಮರ ಧ್ವಜ ಲೊಳಲೊಟ್ಟೆ'

ಎಂದು ಹೇಳಿ 'ಉತ್ತಮ ಪ್ರಭುತ್ವ ಲೊಳಲೊಟ್ಟೆ' ಎಂದು ಘೋಷಿಸುತ್ತಾನೆ. ಆ ಕಾಲದ ವರ್ತಕರು ಮುತ್ತು ರತ್ನಗಳನ್ನು ಬೀದಿಯಲ್ಲಿ ಮಾರಾಟ ಮಾಡುತ್ತಿದ್ದಾಗ, ಅದೇ ಬೀದಿಯಲ್ಲಿ ಓಡಾಡಿದ ದಾಸರು- 'ಲಂಗೋಟಿ ಬಲು ಒಳ್ಳೇದಣ್ಣ ಒಬ್ಬರ ಹಂಗಿಲ್ಲದೆ ಮಡಿಗೆ ಒದಗುವುದಣ್ಣ' ಎಂದು ಹಾಡಿ ಪ್ರತಿಭಟಿಸಿದರು. 'ಕೆಂಡಗಣ್ಣ ನೊಸಲೊಳಗಿಟ್ಟ ನಮ್ಮ ಶಿವ ಕೆಂಡವ ಸೋಂಕಲು ಅಳುವೆಯಲ್ಲೋ ಖೋಡಿ' ಎಂದು ದೈವವನ್ನೇ ಹಾಸ್ಯ ಮಾಡಲು ಅವರು ಹಿಂಜರಿಯಲಿಲ್ಲ.

ಹೀಗೆ ಎಲ್ಲ ಬಗೆಯ ಸ್ಥಾಪಿತ ಹಿತಾಸಕ್ತಿಗಳನ್ನು ವಿರೋಧಿಸಿಯೇ ಕನ್ನಡ ಸಾಹಿತ್ಯ ಬೆಳೆದಿದೆ. ಈ ಮಾತಿಗೆ ಕನ್ನಡದಲ್ಲಿ ಬರೆದ ಸೂಫಿ ಸಂತರು ಕೂಡಾ ಹೊರತಲ್ಲ. ಸಾಲಗುಂದ ಗುರು ಖಾದರಿ ಪೀರನು 'ಮಸೀದಿ ಎಂಬುದು ಹಾಳಾದ ಜಾಗ, ಅದರ ಗೊಡವಿ ನಿನಗ್ಯಾಕಂತೆ?' ಎಂದು ಸಡ್ಡು ಹೊಡೆಯುತ್ತಾನೆ. ಹೀಗೆ ನಮ್ಮ ಸಾಹಿತ್ಯ ಪರಂಪರೆಗೆ ಅದರದ್ದೇ ಒಂದು ಗುಣವಿದೆ. ಅದು ಕನ್ನಡವನ್ನು ಕರ್ನಾಟಕವನ್ನು ಇದುವರೆಗೆ ಬದುಕಿಸಿದೆ. ಆದರೆ ಈಗ ಅದರ ಹಾದಿ ಬದಲಾಗುವಂತಿದೆಯಾದ್ದರಿಂದ ನಾವೆಲ್ಲ ಅರೆಕ್ಷಣ ನಿಂತು, ಯೋಚಿಸಿ, ಮುಂದು ವರಿಯಬೇಕಾಗಿದೆ.

ಹಾಗೆ ನೋಡಿದರೆ, ಆಧುನಿಕತೆಯ ಪರಿಣಾಮವಾಗಿ ನಮ್ಮ ಸಮಾಜ ತೀವ್ರಗತಿ ಯಲ್ಲಿ ಬದಲಾಗುತ್ತಾ ಪ್ರಗತಿಗಾಮಿಯಾಗಬಹುದೆಂದು ಸ್ವಾತಂತ್ರ್ಯಾನಂತರದ ಕಾಲಘಟ್ಟದಲ್ಲಿ ಹುಟ್ಟಿದ್ದ ನಾವೆಲ್ಲ ನಂಬಿದ್ದೆವು. ಆದರೆ ಅದು ಹಾಗಾಗದೆ, ಮತ್ತೆ ನಮ್ಮ ಸಮಾಜದ ಪ್ರತಿಗಾಮೀ ಬೇರುಗಳು ಗಟ್ಟಿಗೊಳ್ಳುತ್ತಿವೆ. ಜಾತಿಯ ಪ್ರಜ್ಞೆ ಹೊಸ ರೂಪ ತಾಳುವುದರ ಜೊತೆಗೆ ಅದರೊಂದಿಗೆ ಕೋಮುವಾದವೂ ಸೇರಿ ಕೊಂಡು, ಸೃಜನಶೀಲವಾಗಿದ್ದ ಜನಸಂಸ್ಕೃತಿಗಳು ಇಂದು ಪತನಮುಖಿಯಾಗುತ್ತಲಿವೆ. ಈ ಬೆಳವಣಿಗೆಯ ತಕ್ಷಣದ ಪರಿಣಾಮವೆಂದರೆ ಸಮುದಾಯ, ಜಾತಿ ಮತ್ತು ಕೋಮುಗಳು ತಮ್ಮ ಆಂತರಿಕ ವಿಮರ್ಶನ ಪ್ರಜ್ಞೆಯನ್ನು ಕಳೆದುಕೊಂಡು, ಸ್ವಯಂ ವಿನಾಶದ ಕಡೆಗೆ ಚಲಿಸುವುದು. ನಿಖರ ಮತ್ತು ಪ್ರಖರ ವಿಮರ್ಶೆಗೆ ತೆರೆದುಕೊಂಡಿದ್ದ ಸಮುದಾಯಗಳು ಇಂದು ಒಂದು ಸಣ್ಣ ಟೀಕೆಗೆ ಬೆಚ್ಚಿ ಬೀಳುತ್ತಿವೆ ಎಂದರೆ ಅವು ಆಂತರಿಕವಾಗಿ ಕುಸಿದಿವೆ ಎಂದೇ ಅರ್ಥ. ಹಾಗಾಗಿಯೇ ಅವು ತಮ್ಮ ಕೀಳರಿಮೆಯನ್ನು ಕಳೆದುಕೊಳ್ಳಲು ಇತರರ ಮೇಲೆ ಆಕ್ರಮಣ ಮಾಡಲಾರಂಭಿಸಿವೆ. ಮೊದಲು ದಲಿತರನ್ನು ಸಜೀವವಾಗಿ ಸುಡಲಾಗುತ್ತಿತ್ತು, ಆದರೆ ಈಗ ದಲಿತರು ಆತ್ಮಹತ್ಯೆ ಮಾಡಿಕೊಳ್ಳುವ ಹಾಗೆ ಮಾಡಲಾಗುತ್ತಿದೆ. ಕೋಮುವಾದಕ್ಕೆ ಕೋಮುವಾದ ಉತ್ತರವಾದರೆ, ಜಾತಿಗೆ ಜಾತಿ ಉತ್ತರವಾದರೆ, ದ್ವೇಷಕ್ಕೆ ದ್ವೇಷ ಉತ್ತರವಾದರೆ ಅವೆಲ್ಲವೂ ದ್ವಿಗುಣಗೊಳ್ಳುತ್ತವೆ ಎಂಬ ಸರಳ ಸತ್ಯವನ್ನು ನಾವೀಗ ಮನಗಾಣ ಲಾರದಾಗಿದ್ದೇವೆ.

ಈ ಬಗೆಯ ಬೆಳವಣಿಗೆಗಳು ಜನರು ಸುದೀರ್ಘ ಕಾಲಾವಧಿಯಲ್ಲಿ ತಮ್ಮ ಅಗತ್ಯಗಳಿಗೆ ಅನುಗುಣವಾಗಿ ಬೆಳೆಸಿಕೊಂಡು ಬಂದ ಸಂಸ್ಕೃತಿಯನ್ನು ಅಧೋಮುಖಿ ಯಾಗಿಸುತ್ತವೆ, ಇಲ್ಲವೇ ಅನ್ಯಸಂಸ್ಕೃತಿಯ ಅಧೀನಕ್ಕೆ ಒಳಗಾಗಿ ತಮ್ಮ ಸೃಜನಶೀಲತೆ ಯನ್ನು ಕಳೆದುಕೊಳ್ಳಲು ಒತ್ತಡ ಹೇರುತ್ತವೆ. ನಮ್ಮ ಸಂಶೋಧನೆಗಳು ಈ ಬಗೆಯ ಬೆಳವಣಿಗೆಗಳಿಗೆ ಮುಖಾಮುಖಿಯಾಗದೇ ಹೋದರೆ ಅವು ಅನುಪಯುಕ್ತವಾಗಿ ಬಿಡುತ್ತವೆ. ಸಾಮಾಜಿಕ ಆಯಾಮವಿಲ್ಲದ ಸಂಶೋಧನೆಗಳು ಭಾರತದಲ್ಲಿ ವಿಶೇಷ ವಾದದ್ದೇನನ್ನೂ ಸಾಧಿಸಲಾರವು.

ಕರ್ನಾಟಕದ ಸಾಂಸ್ಕೃತಿಕ ವೈವಿಧ್ಯದ ಸಂಕೇತಗಳೆಂದರೆ ಇಲ್ಲಿನ ಜನಪದ ಕಲೆಗಳು. ಗೀಗೀ ಪದಗಳಲ್ಲಿ ಗಂಡು ಹೆಚ್ಚೋ, ಹೆಣ್ಣು ಹೆಚ್ಚೋ ಚರ್ಚೆ ನಡೆಯುತ್ತದೆ. ಮುಸಲ್ಮಾನರ ರಂಜಾನ್ ಪದಗಳಲ್ಲಿ ಎಳೆ ವಯಸ್ಸಿನಲ್ಲಿ ಸತ್ತು ಹೋದ ಅಸಗರನನ್ನು ಅಭಿಮನ್ಯುವಿಗೆ ಹೋಲಿಸಲಾಗಿದೆ. ಅಕಾಲ ಮರಣಕ್ಕೀಡಾದ ಕುಂಬಳೆಯ ಆಲಿ, ಮತ್ತು ಕಡಲ ಪಯಣದಲ್ಲಿ ವಿಕ್ರಮ ಸಾಧಿಸಿದ ಬೊಬ್ಬರ್ಯ ಇಬ್ಬರೂ ಸಾಂಸ್ಕೃತಿಕ ವೀರರೆಂದು ಗುರುತಿಸಿಕೊಂಡು ತುಳುನಾಡಿನ ಭೂತಾರಾಧನೆಯಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ. ಇಸ್ಲಾಂ ಧರ್ಮವು ಭೂತಾರಾಧನೆಯನ್ನು ತಾತ್ವಿಕವಾಗಿ ಒಪ್ಪದು, ಹಿಂದೂ ಧರ್ಮವು ಮುಸ್ಲಿಂ ನಾಯಕರನ್ನು ತಮ್ಮ ದೈವವಾಗಿ ಅಂಗೀಕರಿಸದು. ಆದರೆ ಇವೆರಡೂ ಕರಾವಳಿಯ ಮಣ್ಣಲ್ಲಿ ಸಾಧ್ಯವಾಗಿದೆ. ತನಗೆ ದೇವಸ್ಥಾನ ಕಟ್ಟಿಕೊಟ್ಟ ಬಪ್ಪ ಬ್ಯಾರಿಗೆ ಮೂಲ್ಕಿಯ ದುರ್ಗಾ ಪರಮೇಶ್ವರಿಯು ಇಂದಿಗೂ ಗಂಧ ಪ್ರಸಾದ ನೀಡುತ್ತಾಳೆ. ಮಾತ್ರವಲ್ಲ, ಆ ಊರಿಗೆ ಬಪ್ಪನಾಡೆಂಬ ಹೆಸರು ಪ್ರದಾನ ಮಾಡುತ್ತಾಳೆ. ಹಡಗಲಿಯ ಮೈಲಾರ ಲಿಂಗಪ್ಪನು ಅತಿಯಾದ ಹಣದಾಸೆಯ ತಿರುಪತಿ ತಿಮ್ಮಪ್ಪನ ಮಗಳನ್ನು ಮೋಸದಿಂದ ಮದುವೆಯಾಗುವುದಲ್ಲದೆ, ಚಿಕ್ಕಾಸು ಕೂಡಾ ಕೊಡದೆ ತಿಮ್ಮಪ್ಪನನ್ನು ನಿರಂತರವಾಗಿ ಗೋಳಾಡಿಸುತ್ತಾನೆ. ವಿಲೋಮ ವಿವಾಹ ನಿಷಿದ್ಧ ಎಂದು ಶಾಸ್ತ್ರಗಳು ಸಾರುತ್ತಿರುವಾಗಲೇ ಬಾವಿಗೆ ಬಿದ್ದ ದಲಿತ ಹುಡುಗನನ್ನು ಸೀರೆಯ ಸೆರಗಿಳಿಸಿ ಮೇಲೆತ್ತಿದ ಬ್ರಾಹ್ಮಣ ಕನ್ಯೆಯ ಕತೆಗಳನ್ನು ಜನರು ಹೇಳುತ್ತಾ ಬಂದಿದ್ದಾರೆ. ಮುಸಲ್ಮಾನ ಅರಸರು ಹಿಂದೂ ರಾಜ್ಯವನ್ನು ನಾಶ ಮಾಡಿದರು ಎಂದು ಅನೇಕರು ಬರೆಯುತ್ತಿದ್ದಾಗ ಮುಸಲ್ಮಾನ ಹುಡುಗಿಯು ಹಿಂದೂ ಯುವಕನ್ನು ಪ್ರೀತಿಸಿದ ಕತೆಯನ್ನು ನಮ್ಮ ಜನಪದ ಕಲೆಗಳು ರಂಗದ ಮೇಲೆ ಪ್ರದರ್ಶಿಸುತ್ತಾ ಬಂದಿವೆ. ಇಂಥ ಹಲವು ಮುಕ್ತ ಮತ್ತು ಅದ್ಭುತ ನಿರೂಪಣೆಗಳಿರುವ ನಾಡು ಇದೀಗ ತನ್ನ ಬಾಗಿಲುಗಳನ್ನು ಮತ್ತಷ್ಟು ವಿಸ್ತಾರವಾಗಿ ತೆರೆದುಕೊಳ್ಳಬೇಕಿತ್ತು. ಆದರೆ ಅವು ಹೆಚ್ಚು ಹೆಚ್ಚು ಸಂಕುಚಿತಗೊಂಡು ಮುಚ್ಚಿಕೊಳ್ಳುತ್ತಿವೆ. ಜನಪದ ಸಂಸ್ಕೃತಿಗಳ ಅವನತಿಯು ಪ್ರಚಲಿತ ಕರ್ನಾಟಕದ ಪ್ರಮುಖ ಸಾಂಸ್ಕೃತಿಕ ವಿದ್ಯಮಾನಗಳಲ್ಲಿ ಒಂದು. ಇಂಥ ಬೆಳವಣಿಗೆಗಳ ಬಗೆಗೆ ಗಂಭೀರವಾದ ಚರ್ಚೆ ನಮ್ಮ ವಿಶ್ವವಿದ್ಯಾಲಯ ಗಳಲ್ಲಿ ನಡೆಯಲು ಸಾಧ್ಯವಾದರೆ ಅದರಿಂದ ಸಮಾಜಕ್ಕೆ ತುಂಬಾ ಪ್ರಯೋಜನವುಂಟು. ಭಾಷೆ, ಗಡಿ ಮತ್ತು ಸಂಸ್ಕೃತಿಯ ವಿಷಯಗಳು ಬಹುಬೇಗ ಜನರನ್ನು ತಪ್ಪುದಾರಿ ಗೆಳೆದದ್ದನ್ನು ವಿಶ್ವದ ಇತಿಹಾಸ ರುಜುವಾತು ಪಡಿಸಿದೆ. ಜಗತ್ತಿನ ಎಲ್ಲೆಡೆಯೂ ಈ ಮೂರು ಶಬ್ದಗಳನ್ನು ಉಪಯೋಗಿಸಿಯೇ ಫ್ಯಾಸಿಸ್ಟ್ ಶಕ್ತಿಗಳು ವಿಜೃಂಭಿಸಿವೆ. ಕಾರಣ ನಮ್ಮ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನೆಗಳು ಈ ಬೆಳವಣಿಗೆಗಳ ಕುರಿತು ವಿಶೇಷ ಎಚ್ಚರ ವಹಿಸಬೇಕೆಂದು ನಾನು ಭಾವಿಸುತ್ತೇನೆ.

೨. ಜ್ಞಾನದ ಅಂತಾರಾಷ್ಟ್ರೀಕರಣ ಮತ್ತು ಕನ್ನಡ

ಹೀಗೆ ಕನ್ನಡ ಭಾಷೆಯು ಒಳಗಿನಿಂದ ಒಂದು ಬಗೆಯ ಒತ್ತಡಕ್ಕೆ ಒಳಗಾಗುತ್ತಿದ್ದರೆ, ಇನ್ನೊಂದೆಡೆಯಲ್ಲಿ ಅದು ಇಂದಿನ ಜಾಗತೀಕರಣ ಪ್ರಕ್ರಿಯೆಯ ತೀವ್ರ ಹೊಡೆತಕ್ಕೆ ಸಿಕ್ಕಿ ಇನ್ನೊಂದು ಬಗೆಯಲ್ಲಿ ನಲುಗುತ್ತಿದೆ. ಭಾರತದ ಅನೇಕ ಭಾಷೆಗಳು ಈ ವಿಷಯದಲ್ಲಿ ಕನ್ನಡದೊಂದಿಗಿವೆ. ನಮ್ಮ ದೇಶಕ್ಕೆ ರಾಷ್ಟ್ರೀಯ ಭಾಷಾನೀತಿ ಎಂಬುದು ಇಲ್ಲವಾದ್ದರಿಂದ ಈ ಗೊಂದಲವು ಅನೇಕ ಭಾಷೆಗಳನ್ನು ಸುಲಭವಾಗಿ ಕೊಂದು ಹಾಕುವ ಮಟ್ಟಕ್ಕೆ ಬೆಳೆದಿದೆ.

ಖಚಿತವಾಗಿ ಇದು ಜಾಗತೀಕರಣದ ಕಾಲ. ಆದರೆ ಜಾಗತೀಕರಣವು ಭಾರತಕ್ಕೆ ಹೊಸದೇನೂ ಅಲ್ಲ. ಭಾರತದ ಭೌಗೋಳಿಕತೆಯು ಚಾರಿತ್ರಿಕವಾಗಿ ಅದನ್ನು ವಿಶ್ವದೊಂದಿಗೆ ಸಹಜವಾಗಿ ಜೋಡಿಸಿದೆ. ನಮ್ಮ ಊಟದ ಮೂಲಭೂತ ಘಟಕ ಗಳಾದ ಬಟಾಟೆ, ಟೊಮೆಟೋ, ಗೆಣಸು, ಜೋಳ, ಮೆಣಸು ಮೊದಲಾದುವುಗಳೆಲ್ಲ ಎಂದೋ ಹೊರದೇಶದಿಂದ ಬಂದು ನಮ್ಮ ಆಹಾರಪದ್ಧತಿಯಲ್ಲಿ ಸೇರಿಕೊಂಡಿವೆ. ಅನಾನಸು, ಪೇರಳೆ, ಚಿಕ್ಕು ಮೊದಲಾದ ಹಣ್ಣುಗಳೂ ಮೂಲತಃ ನಮ್ಮವಲ್ಲ. ಬೆಳ್ಳುಳ್ಳಿ, ಅರಿಸಿನ, ಶುಂಠಿ ಮೊದಲಾದ ಪರಕೀಯ ಪದಾರ್ಥಗಳು ಇಂದು ನಮ್ಮ ದೇಸಿ ಎನ್ನಲಾದ ವೈದ್ಯಪದ್ಧತಿಯೊಂದಿಗೂ ಸೇರಿಕೊಂಡಿವೆ. ರೈಮಂಡೋ ಪಣಿಕ್ಕರ್ ಅವರ ಪ್ರಕಾರ ಚೈನಾದಲ್ಲಿ ಅತಿ ಪ್ರಾಚೀನ ಕಾಲದಲ್ಲಿ ಪ್ರಚಲಿತದಲ್ಲಿದ್ದ ಅನ್ನದ ಉಂಡೆಯೇ ಇಂದು ಇಡ್ಲಿಯಾಗಿ ನಮ್ಮ ಮುಂದೆ ಕಾಣಿಸಿಕೊಂಡಿದೆ. ಹೀಗೆ ಹೊರಗಿನಿಂದ ಬಂದ ಈ ಪದಾರ್ಥಗಳನ್ನು ನಮ್ಮ ದೇವರುಗಳು ಇಂದಿಗೂ ಸ್ವೀಕರಿಸಲಾರವು.

ಇಷ್ಟಿದ್ದರೂ ತೊಂಬತ್ತರ ದಶಕದಿಂದೀಚೆಗೆ ಕಾಣಿಸಿಕೊಂಡ ಉದಾರೀಕರಣ, ಜಾಗತೀಕರಣ, ಖಾಸಗೀಕರಣ, ವ್ಯಾಪಾರೀಕರಣ ಹಾಗೂ ಮಾರುಕಟ್ಟೆಯ ನೀತಿಗಳು ಹಿಂದಿಗಿಂತ ತುಂಬಾ ಭಿನ್ನವಾಗಿದ್ದು ಜಗತ್ತನ್ನು ಆಮೂಲಾಗ್ರವಾಗಿ ಬದಲಾಯಿಸಿವೆ. ಮೇಲಿನ ಪರಿಭಾಷೆಗಳು ಮೂಲತಃ ಆರ್ಥಿಕ ಕ್ಷೇತ್ರಕ್ಕೆ ಸಂಬಂಧಿಸಿವೆಯಾದರೂ ಇಂದು ಅವು ನಮ್ಮ ಸಮಾಜವನ್ನು ಇಡಿಯಾಗಿ ಆಕ್ರಮಿಸಿಕೊಂಡಿವೆ. ಪರಿಣಾಮವಾಗಿ ಅವು ಇದೀಗ ಉನ್ನತ ಶಿಕ್ಷಣ ಕ್ಷೇತ್ರವನ್ನೂ ತನ್ನ ತೆಕ್ಕೆಗೆ ಒಗ್ಗಿಸಿಕೊಳ್ಳಲು ಸಜ್ಜಾಗಿದೆ. ಉನ್ನತ ಶಿಕ್ಷಣದ ಅಂತಾರಾಷ್ಟ್ರೀಕರಣ ಹಾಗೂ ಜ್ಞಾನೋತ್ಪತ್ತಿಯ ಅಂತಾರಾಷ್ಟ್ರೀಕರಣ (Internationalization of higher education and Internationalization of knowledge production) ಇಂದಿನ ತೀವ್ರವಾದ ಪ್ರಕ್ರಿಯೆಗಳಲ್ಲಿ ಒಂದಾಗಿದೆ. 'ವಿಶ್ವದ ಕುರಿತಾದ ಭಾರತದ ತಿಳುವಳಿಕೆಗಳಿಗಾಗಿ ಹಾಗೂ ಭಾರತದ ಕುರಿತಾಗಿ ವಿಶ್ವದ ತಿಳುವಳಿಕೆಗಾಗಿ (To the world understanding and understanding of India in the world) ಈ ಅಂತಾರಾಷ್ಟ್ರೀಕರಣ ಪ್ರಕ್ರಿಯೆ ಬಹಳ ಅಗತ್ಯ ಎಂದು ಎಲ್ಲ ಸರಕಾರಗಳೂ ಇಂದು ಭಾವಿಸತೊಡಗಿವೆ. ಉನ್ನತ ಶಿಕ್ಷಣದ ಜಾಗತೀಕರಣದ ಪರವಾಗಿ ಯುನೆಸ್ಕೋ (United Nations Educational, Scientific and Cultural Organization -UNESCO) ಮತ್ತು ವಿಶ್ವವಿದ್ಯಾಲಯ ಗಳ ಅಂತಾರಾಷ್ಟ್ರೀಯ ಸಂಸ್ಥೆಯು (International Association of Universities - IAU) ಜಂಟಿಯಾಗಿ ಪ್ರಬಲವಾದ ವಾದ ಮಂಡಿಸಿವೆ. ಸರಕಾರಗಳ ಪಾಲಿಗೆ 'ಅನುತ್ಪಾದಕ' ವಸ್ತುವಾಗಿರುವ ಉನ್ನತ ಶಿಕ್ಷಣವನ್ನು 'ಉತ್ಪಾದಕ ಅಥವಾ ಲಾಭದಾಯಕ'ವನ್ನಾಗಿ ಪರಿವರ್ತಿಸುವುದು ಈ ವಾದಗಳ ಉದ್ದೇಶ. ಇದನ್ನು ಗಂಭೀರವಾಗಿ ಪರಿಗಣಿಸಿದ ಸರಕಾರಗಳು ತಮ್ಮ ಆರ್ಥಿಕ ನಷ್ಟವನ್ನು ಕಡಿಮೆ ಮಾಡಿಕೊಳ್ಳಲು ಉನ್ನತ ಶಿಕ್ಷಣದ ಖಾಸಗೀಕರಣಕ್ಕೆ ಕ್ರಮ ಕೈಕೊಳ್ಳಲಾರಂಭಿಸಿದುವು. ಪರಿಣಾಮವಾಗಿ ಖಾಸಗಿ ವಿಶ್ವವಿದ್ಯಾಲಯಗಳು, ಡೀಮ್ಡ್ ವಿಶ್ವವಿದ್ಯಾಲಯಗಳು, ಮತ್ತು ವಿದೇಶಿ ವಿಶ್ವವಿದ್ಯಾಲಯಗಳು ದೊಡ್ಡ ಪ್ರಮಾಣದಲ್ಲಿ ಉನ್ನತ ಶಿಕ್ಷಣದತ್ತ ಹೊರಳಿಕೊಂಡವು. ಅವು ತಮ್ಮ ಆರ್ಥಿಕ ಭದ್ರತೆಗಾಗಿ ನಯವಾದ ಬಗೆಯಲ್ಲಿ 'ಶುಲ್ಕ' ವಸೂಲು ಮಾಡಲು ಹೊರಟಿವೆ. ಈ ಪ್ರಕ್ರಿಯೆಯಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳೂ ಸರಕಾರಗಳೂ ಜೊತೆಯಾಗಿ ಹಣ ಮಾಡಲಾರಂಭಿಸಿದುವು. ಒಂದು ವರದಿಯ ಪ್ರಕಾರ ೨೦೧೩–೨೦೧೪ರಲ್ಲಿ ಅಮೆರಿಕಾ ದೇಶದಲ್ಲಿ ಹೊರದೇಶದಿಂದ ಆಗಮಿಸಿದ ೧೧,೩೦,೦೦೦ ವಿದ್ಯಾರ್ಥಿಗಳು ಅಧ್ಯಯನ ಮಾಡಿದ್ದು ಅದರಿಂದ ಆ ದೇಶಕ್ಕೆ ೨೫ ಬಿಲಿಯನ್ ಡಾಲರ್ ಆದಾಯವಾಗಿದೆ. ಆಸ್ಟ್ರೇಲಿಯಾದಲ್ಲಿ ೨೦೦೧–೨೦೦೨ರಲ್ಲಿ ಸುಮಾರು ೨ ಲಕ್ಷ ಹೊರದೇಶದ ವಿದ್ಯಾರ್ಥಿಗಳು ಅಭ್ಯಸಿಸುತ್ತಿದ್ದು ಆಗ ಆ ದೇಶದ ಆದಾಯ ೪.೨ ಬಿಲಿಯನ್

ಆಸ್ಟ್ರೇಲಿಯನ್ ಡಾಲರ್ ಆಗಿತ್ತು. ಜಾಗತೀಕರಣದ ಪರಿಣಾಮವಾಗಿ ಈ ಆದಾಯವು ೨೦೧೩–೧೪ರಲ್ಲಿ ೧೪ ಬಿಲಿಯನ್ ಡಾಲರ್‌ಗೆ ಏರಿತು. ಸಣ್ಣ ದೇಶ ನ್ಯೂಜಿಲೆಂಡ್‌ನಲ್ಲಿ ೨೦೦೧–೨೦೧೨ರಲ್ಲಿ ಸುಮಾರು ಒಂದು ಲಕ್ಷ ವಿದೇಶಿ ವಿದ್ಯಾರ್ಥಿಗಳು ಅಭ್ಯಾಸ ಮಾಡಿದ್ದು ಆ ದೇಶದ ಬೊಕ್ಕಸಕ್ಕೆ ೧.೭ ಬಿಲಿಯನ್ ಡಾಲರ್ ಆದಾಯವಾಗಿದ್ದು ೨೦೧೩–೧೪ರಲ್ಲಿ ಅದು ೬ ಬಿಲಿಯನ್ ಡಾಲರ್‌ಗಳಿಗೆ ಏರಿತು. ಈ ಬಗೆಯ ಆದಾಯದ ಕುರಿತು ಅಭಿವೃದ್ಧಿಶೀಲ ದೇಶಗಳು ಕಣ್ಣು ಮುಚ್ಚಿ ಕುಳಿತಿರಲು ಸಾಧ್ಯವಿಲ್ಲ. ಏಕೆಂದರೆ ೨೧ನೇ ಶತಮಾನದ ಮೊದಲ ದಶಕದಲ್ಲಿ ಉನ್ನತ ಶಿಕ್ಷಣವು ಬಿಲಿಯನ್ ಡಾಲರ್ ಆದಾಯದ ಪ್ರಶ್ನೆಯಾಗಿ ಮಾರ್ಪಟ್ಟಿದೆ.

ಭಾರತದಲ್ಲಿ ಶಿಕ್ಷಣದ ಅಂತಾರಾಷ್ಟ್ರೀಕರಣ ಪ್ರಕ್ರಿಯೆಯು ಗ್ಯಾಟ್ (General Agreement of Trade in Services) ಹಾಗೂ ಡಬ್ಲ್ಯುಟಿಒ(World Trade Organizations) ಒಪ್ಪಂದದ ಮೇರೆಗೆ ಆರಂಭವಾಯಿತು. ಏಪ್ರಿಲ್ ೧, ೨೦೦೫ ರಂದು ಜಾರಿಗೆ ಬಂದ ಈ ಒಪ್ಪಂದದ ಅನುಸಾರವಾಗಿ, ೧೦ನೇ ಪಂಚವಾರ್ಷಿಕ ಯೋಜನೆಯಲ್ಲಿ(೨೦೦೨–೨೦೦೭) ಉನ್ನತ ಶಿಕ್ಷಣವನ್ನು 'Educational Services as sector of industry under GATS' ಎಂದು ಇತರ ೧೨ ವಿಷಯ ಗಳೊಂದಿಗೆ ಸೇರಿಸಿ ಘೋಷಿಸಲಾಗಿದೆ. ೧೧ ಮತ್ತು ೧೨ನೇ ಪಂಚವಾರ್ಷಿಕ ಯೋಜನೆಯಲ್ಲಿ 'ನಮ್ಮ ತರುಣರನ್ನು ಲೇಬರ್ ಮಾರುಕಟ್ಟೆಗೆ' ಸಿದ್ಧಪಡಿಸಬೇಕಾದ ಅಗತ್ಯವಿದೆ' (It equips young people with skills relevant for the labour market) ಎಂದು ಹೇಳಲಾಗಿದೆ. ಮಾತ್ರವಲ್ಲ, ೨೦೨೦ರ ಹೊತ್ತಿಗೆ ಚೀನಾ ದೇಶಕ್ಕೆ ಅಗತ್ಯವಾಗಿರುವ ೪೦ ಕೋಟಿ ಪರಿಣತರನ್ನು ನಾವು ಸೃಷ್ಟಿ ಮಾಡಬೇಕಾಗಿದೆ ಎಂದೂ ಅದು ಘೋಷಿಸಿದೆ. ಹೀಗಾಗಿ ಈಗ ಇದು ಸರಕಾರದ ಒಂದು ಅಂಗೀಕೃತ ಮತ್ತು ಆದ್ಯತೆಯ ಯೋಜನೆಯಾಗಿದೆ. ಈ ಯೋಜನೆಯ ಭಾಗವಾಗಿ ವಿಶ್ವವಿದ್ಯಾಲಯ ಅನುದಾನ ಆಯೋಗವು ಈ ಕೆಳಗಿನ ಮೂರು ಅಂಶಗಳನ್ನು ಜಾರಿಗೆ ತರಲು ಇದೀಗ ಕಾರ್ಯಪ್ರವೃತ್ತವಾಗಿದೆ. ಅವುಗಳೆಂದರೆ-

೧. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ಹಾಜರಾತಿ.

೨. ದೇಶೀಯ ಮತ್ತು ವಿದೇಶೀಯ ವಿದ್ಯಾಲಯಗಳು ಜಂಟಿಯಾಗಿ ಕೆಲಸ ಮಾಡುವ ಅವಳಿ ಕಾರ್ಯಕ್ರಮಗಳು(twinning programs) ಹಾಗೂ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಗಳು(exchange programs) ಮತ್ತು

೩. ಅತ್ಯುತ್ತಮ ಶಿಕ್ಷಣದ ರಫ್ತಿಗಾಗಿ ವಿಶೇಷ ವಲಯಗಳ ಸ್ಥಾಪನೆ (Special educational excellence and export zones - (SEEEZ).

ಈ ಬದಲಾದ ಪರಿಸ್ಥಿತಿಗೆ ಅನುಗುಣವಾದ ಪಠ್ಯಕ್ರಮ, ಅಧ್ಯಯನದ ಅವಧಿ ಮತ್ತು ಮೌಲ್ಯಮಾಪನ ವಿಧಾನಗಳಲ್ಲಿ ಸೂಕ್ತವಾದ ಬದಲಾವಣೆಗಳನ್ನು ಮಾಡಿಕೊಳ್ಳಲು ಸಿದ್ಧತೆ ನಡೆಯುತ್ತಿದೆ. ಮುಖ್ಯವಾಗಿ ಇದೀಗ ಆಗಲೇ ಅನೇಕ ಖಾಸಗಿ ವಿಶ್ವವಿದ್ಯಾಲಯಗಳು ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಸಂಬಂಧ ಸ್ಥಾಪಿಸಿಕೊಂಡಿವೆ. ವಿದೇಶಿ ವಿಶ್ವವಿದ್ಯಾಲಯಗಳು ಭಾರತದಲ್ಲಿ ತಮ್ಮ ಅಧ್ಯಯನ ಕೇಂದ್ರಗಳನ್ನು ತೆರೆದಿವೆ. ವಿದೇಶಿ ಅಧ್ಯಾಪಕರು ಮತ್ತು ಭಾರತೀಯ ಅಧ್ಯಾಪಕರು ಒಟ್ಟಿಗೇ ಕೆಲಸ ಮಾಡಲು ಸಾಧ್ಯವಾಗುವ ಹಾಗೆ ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ. ವಿಶ್ವವಿದ್ಯಾಲಯಗಳ ನಡುವೆ ಗುಣಾಂಕಗಳ(ಕ್ರೆಡಿಟ್ಸ್) ವರ್ಗಾವಣೆ ಸಾಧ್ಯವಾಗುತ್ತಿದೆ. ಈ ಕ್ರಮಗಳು ಉನ್ನತ ಶಿಕ್ಷಣದ ರೀತಿ ನೀತಿಗಳನ್ನು ಈಗಾಗಲೇ ಗಮನಾರ್ಹವಾಗಿ ಬದಲಾಯಿ ಸುತ್ತಿವೆ. ಸದ್ಯಕ್ಕೆ ಈ ಪ್ರಯೋಗವು ಕಾರ್ಪೋರೇಟ್ ಜಗತ್ತಿಗೆ ಬೇಕಾದ ಬುದ್ಧಿವಂತರನ್ನು ಮತ್ತು ಪರಿಣತ ಕೆಲಸಗಾರರನ್ನು ಸೃಷ್ಟಿಸಿ ಕೊಡುವಲ್ಲಿ ಸಫಲವಾಗಿವೆ.

ಇಂಥ ಬದಲಾದ ಪರಿಸ್ಥಿತಿಯಲ್ಲಿ ಸಾಮಾಜಿಕ ನ್ಯಾಯ ಎಂಬುದು ಚಲಾವಣೆಯಲ್ಲಿಲ್ಲದ ನಾಣ್ಯವಾಗುತ್ತಿದೆ. ಜೊತೆಗೆ ಮಾನವಿಕಗಳು ಬೇಡಿಕೆಯಿಲ್ಲದ ಅಧ್ಯಯನ ಶಿಸ್ತುಗಳಾಗಿ ಪರಿವರ್ತನೆಗೊಂಡು ದುರ್ಬಲವಾಗುತ್ತಿವೆ. ೧೦ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಂಸ್ಕೃತ ಮತ್ತು ಹಿಂದಿ ಭಾಷೆಯ ಅಭಿವೃದ್ಧಿಗೆ ಕೆಲವು ಯೋಜನೆ ಗಳನ್ನು ರೂಪಿಸಿದ್ದರೂ ಉಳಿದ ಭಾರತೀಯ ಭಾಷೆಗಳ ಬಗೆಗೆ ಅದು ದಿವ್ಯ ಮೌನವನ್ನು ತಾಳಿದೆ. ೧೧ ಮತ್ತು ೧೨ನೇ ಪಂಚವಾರ್ಷಿಕ ಯೋಜನೆಗಳಲ್ಲಿ ಭಾರತೀಯ ಭಾಷೆಗಳ ಬಗ್ಗೆ ಯಾಂತ್ರಿಕವಾಗಿ ನಾಲ್ಕು ಮಾತು ಹೇಳಲಾಗಿದೆಯಲ್ಲದೆ, ಅವುಗಳ ಅಭಿವೃದ್ಧಿಯ ಬಗೆಗೆ ಯಾವುದೇ

ಯೋಜನೆಗಳನ್ನು ರೂಪಿಸಿಲ್ಲ. ಹೀಗೆ ಮಾರುಕಟ್ಟೆಯ ಧ್ಯೇಯ ಧೋರಣೆಗಳೇ ಉನ್ನತ ಶಿಕ್ಷಣವನ್ನು ನಿಯಂತ್ರಿಸುತ್ತಿರುವ ಇಂದಿನ ಸಂದರ್ಭದಲ್ಲಿ ಕನ್ನಡದಂಥ ಸಣ್ಣ ಭಾಷೆಗಳ ಭವಿಷ್ಯವೇನು ಎಂಬುದರ ಬಗ್ಗೆ ನಾವು ಗಂಭೀರವಾಗಿ ಚಿಂತಿಸಬೇಕು.

ಮೇಲೆ ಹೇಳಿದ ಮಾರುಕಟ್ಟೆ ಕೇಂದ್ರಿತ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಜ್ಞಾನದ ಉತ್ಪತ್ತಿ ಮತ್ತು ವಿತರಣೆಯು ಅಂತಾರಾಷ್ಟ್ರೀಯವಾಗುವುದು ಅನಿವಾರ್ಯ. ಈ ಪ್ರಕ್ರಿಯೆಯಲ್ಲಿ ಆಳುವ ಶಕ್ತಿಶಾಲಿ ಭಾಷೆಯಾಗಿ ಇಂಗ್ಲಿಷ್ ಹೊರಹೊಮ್ಮಿದೆ. 'ಇಂಗ್ಲಿಷ್ ಭಾಷೆ ಕಲಿತರೆ ಆರ್ಥಿಕವಾಗಿ ಅಭಿವೃದ್ಧಿ ಹೊಂದಬಹುದು' ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಜನರೂ ಈ ಬೆಳವಣಿಗೆಯನ್ನು ಒಪ್ಪಿಕೊಂಡಿದ್ದಾರೆ. ಇದು ಕನ್ನಡವೂ ಸೇರಿದಂತೆ ಜಗತ್ತಿನ ಅನೇಕ ಸಣ್ಣ ಭಾಷೆಗಳ ಕುರಿತು ಆಯಾ ದೇಶದ ಸರಕಾರಗಳು ಮತ್ತು ಜನರು ನಿರ್ಲಕ್ಷ್ಯ ವಹಿಸುವಂತೆ ಮಾಡಿದೆ. ಇದರಿಂದ ಜಗತ್ತಿನಾದ್ಯಂತ ಇಂದು ಅನೇಕ ಭಾಷೆಗಳು ಅವಸಾನದ ಅಂಚಿಗೆ ಬಂದು ನಿಲ್ಲುವಂತಾಗಿದೆ. ಸಣ್ಣ ಭಾಷೆಗಳ ಧ್ವನಿ ಉಡುಗಿವೆ. ಅವುಗಳ ನಾಲಗೆ ಕಟ್ಟಿಹೋಗಿವೆ. ಉಳಿಯುವಿಕೆಗಾಗಿ ಅವು ಹೆಣಗಾಡುತ್ತಿವೆ. ಕಲಿಕೆ ಮತ್ತು ಉಪಯೋಗಗಳ ವಿಷಯದಲ್ಲಿ ಇಂಗ್ಲಿಷ್ ಸಾವಿರಾರು ಸಣ್ಣ ಭಾಷೆಗಳನ್ನು ಅಪಾಯದ ಅಂಚಿಗೆ ತಳ್ಳಿದೆ.

ಭಾರತದಲ್ಲಿ ಈ ಸಮಸ್ಯೆ ಇನ್ನೂ ತೀವ್ರತರವಾಗಿದ್ದರೂ, ಕೋಮುವಾದ, ಧರ್ಮ, ಭ್ರಷ್ಟಾಚಾರ, ಜಾತಿ, ರಾಜಕೀಯ, ಮತ್ತಿತರ ವಿಷಯಗಳ ಕುರಿತು ಇಲ್ಲಿ ಚರ್ಚೆ ನಡೆದ ಹಾಗೆ, ಅವಸಾನದ ಅಂಚಿನಲ್ಲಿರುವ ಭಾಷೆಗಳ ಉಳಿಯುವಿಕೆಯ ಕುರಿತು ಸಂವಾದ ನಡೆಯುತ್ತಿಲ್ಲ. ಇಂದು ಬಹಳ ಪ್ರಭಾವಶಾಲಿಯಾಗಿರುವ ಮಾಧ್ಯಮಗಳಿಗೂ ಈ ಕುರಿತು ಆಸಕ್ತಿಯಿಲ್ಲ. ಭಾಷೆಯ ಅವನತಿಯ ಅಪಾಯಗಳ ಕುರಿತು ತಿಳುವಳಿಕೆ ಇಲ್ಲದಿರುವುದೇ ಇದಕ್ಕೆ ಪ್ರಮುಖ ಕಾರಣ.

ಇಂದು ವಿಶ್ವದಾದ್ಯಂತ ಜೀವಂತವಿರುವ ಸುಮಾರು ೭೦೦೦ ಭಾಷೆಗಳನ್ನು ಸಣ್ಣ ಭಾಷೆಗಳೆಂದು ಗುರುತಿಸಲಾಗಿದೆ. ಇದರಲ್ಲಿ ಸುಮಾರು ೩೭೦೦ರಷ್ಟು ಭಾಷೆಗಳು ಭಾರತದಲ್ಲಿಯೇ ಇವೆ. ಇದು ಸ್ಥೂಲ ರೂಪದ ತಿಳುವಳಿಕೆ. ಆದರೆ ಸೂಕ್ಷ್ಮವಾಗಿ ಮತ್ತು ಭಿನ್ನವಾಗಿ ನೋಡಿದರೆ ಇವುಗಳ ಸಂಖ್ಯೆ ಇನ್ನೂ ಹೆಚ್ಚಾಗುತ್ತದೆ. ಉದಾಹರಣೆಗೆ ಇಂಗ್ಲಿಷಿಗೆ ಹೋಲಿಸಿದರೆ ಹಿಂದಿ ಸಣ್ಣ ಭಾಷೆ ಮತ್ತು ಅದಕ್ಕೆ ಇಂಗ್ಲಿಷಿನಿಂದ ಅಪಚಾರವಾಗುತ್ತಿದೆ. ಆದರೆ ರಾಜಸ್ಥಾನಿ, ಭೋಜಪುರಿ, ಮೈಥಿಲಿ ಮತ್ತಿತರ ಭಾಷೆಗಳನ್ನು ಗಮನಿಸಿದಾಗ ಅವುಗಳ ಮೇಲೆ ಹಿಂದಿ ಭಾಷೆಯಿಂದಲೇ ಅಪಚಾರ ವಾಗುವುದನ್ನು ಕಾಣುತ್ತೇವೆ. ಹಿಂದಿಗೆ ಹೋಲಿಸಿದರೆ ಕನ್ನಡ ಭಾಷೆ ಸಣ್ಣದು. ಕಾರಣ ಹಿಂದಿ ಕನ್ನಡದ ಮೇಲೆ ಆಕ್ರಮಣ ಮಾಡುತ್ತದೆ. ಕನ್ನಡ ತುಳುವನ್ನು ಆಕ್ರಮಿಸಿಕೊಳ್ಳುತ್ತದೆ. ತುಳುವನ್ನು ಮಾತ್ರ ಗಮನಿಸಿದರೂ ಸಾಕು, ಅಲ್ಲಿ ದಲಿತರ ತುಳು ಸಾಮಾನ್ಯವಾಗಿ ಸವರ್ಣೀಯರ ತುಳುವಿಗೆ ತಲೆಬಾಗುತ್ತದೆ. ನಾವು ನೋಡುತ್ತಿದ್ದಂತೆಯೇ ಕೊರಗ ಭಾಷೆಯ ಜಾಗವನ್ನು ತುಳು ಪೂರ್ತಿಯಾಗಿ ಆಕ್ರಮಿಸಿಕೊಂಡಿತು. ಹೀಗೆ ಕೊನೆಯಿಲ್ಲದ ಈ ಸಂಕಷ್ಟದಲ್ಲಿ ಭಾಷಾ ಅಲ್ಪಸಂಖ್ಯಾತರನ್ನು ನಾವು ಇದುವರೆಗೆ ಸರಿಯಾಗಿ ನಿರ್ವಚಿಸಿಯೇ ಇಲ್ಲ. ನಮ್ಮ ದೇಶಕ್ಕೆ ರಾಷ್ಟ್ರೀಯ ಭಾಷಾನೀತಿ ಎಂಬುದೇ ಇಲ್ಲ.

ಭಾರತದಲ್ಲಿ ಇದೀಗ ೨೨ ಭಾಷೆಗಳನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸಿ ಅವುಗಳನ್ನು ಸಬಲೀಕರಣಗೊಳಿಸಲು ಯತ್ನಿಸಲಾಗಿದೆ. ಇದರಲ್ಲಿ ೧೮ ಭಾಷೆಗಳು ಉತ್ತರ ಭಾರತಕ್ಕೆ ಸೇರಿದರೆ, ಕೇವಲ ನಾಲ್ಕು ಭಾಷೆಗಳು ದ್ರಾವಿಡ ಭಾಷಾವರ್ಗಕ್ಕೆ ಸೇರಿವೆ. ಈ ನಡುವೆ ಇತರ ೩೮ ಭಾಷೆಗಳು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಲು ಸರಕಾರದ ಮೇಲೆ ಒತ್ತಡ ಹಾಕುತ್ತಿದ್ದು ಅದರಲ್ಲಿ ಕೇವಲ ಎರಡು(ತುಳು ಮತ್ತು ಕೊಡವ) ದ್ರಾವಿಡವರ್ಗಕ್ಕೆ ಸೇರಿವೆ. ಈ ಬೇಡಿಕೆಗಳನ್ನು ಸವಾಲಾಗಿ ಸ್ವೀಕರಿಸಿ, ಭಾಷೆಗಳ ಅಭಿವೃದ್ಧಿಗೆ ಕೆಲಸ ಮಾಡಬೇಕಾಗಿದ್ದ ಸರಕಾರ ಇದೀಗ ಎಂಟನೆಯ ಪರಿಚ್ಛೇದದ ಕೆಲವು ಸವಲತ್ತುಗಳನ್ನೇ ಕಡಿತಗೊಳಿಸಲು ಆರಂಭಿಸಿದೆ. ಉದಾಹರಣೆಗೆ, ಕೇಂದ್ರ ಲೋಕಸೇವಾ ಆಯೋಗವು ಎಂಟನೇ ಪರಿಚ್ಛೇದದಲ್ಲಿ ಹೊಸದಾಗಿ ಸೇರುವ ಭಾಷೆಗಳಲ್ಲಿ ಇದೀಗ ಪರೀಕ್ಷೆಗಳನ್ನು ನಡೆಸಬೇಕಾಗಿಲ್ಲ. ಅಂದರೆ, ಸ್ಪರ್ಧಿಯೊಬ್ಬನ ಮಾತೃಭಾಷೆಗೆ ಅಲ್ಲಿ ಅವಕಾಶವಿಲ್ಲ. ಸಣ್ಣ ಭಾಷೆಗಳಲ್ಲಿ ಪ್ರಶ್ನೆಪತ್ರಿಕೆಗಳನ್ನು ಸಿದ್ಧಮಾಡುವವರಿಲ್ಲವೆಂದು ಅದು ಹೇಳುತ್ತದೆ. ಪ್ರಶ್ನೆಪತ್ರಿಕೆ ತಯಾರು ಮಾಡುವಂಥ ವಿದ್ವಾಂಸರ ಸೃಷ್ಟಿಗೆ ಸರಕಾರ ಏನು ಕ್ರಮ ಕೈಗೊಂಡಿದೆ ಎಂದು ಕೇಳಿದರೆ ಅದರ ಬಳಿ ಉತ್ತರವಿಲ್ಲ. ಇಂಥ ಪ್ರಕ್ರಿಯೆಗಳ ಜೊತೆಗೆ ಕೆಲವು ರಾಜ್ಯ ಸರಕಾರಗಳೂ ಸೇರಿಕೊಂಡಿವೆ. ಉದಾಹರಣೆಗೆ ದೆಹಲಿಯಲ್ಲಿ ಹಿಂದಿ, ಪಂಜಾಬಿ ಮತ್ತು ಉರ್ದು ಅಧಿಕೃತ ಭಾಷೆಗಳಾದರೆ, ಪಶ್ಚಿಮ ಬಂಗಾಲದಲ್ಲಿ ಬಾಂಗ್ಲಾ, ನೇಪಾಲಿ, ಹಿಂದಿ, ಉರ್ದು ಮತ್ತು ಸಂತಾಲಿ ಭಾಷೆಗಳು ಅಧಿಕೃತ ರಾಜ್ಯಭಾಷೆಗಳಾಗಿವೆ. ತೆಲಂಗಾಣದಲ್ಲಿ ತೆಲುಗುವಿನ ಜೊತೆಗೆ ಉರ್ದುವನ್ನು ಅಂಗೀಕರಿಸಲಾಗಿದೆ. ಆದರೆ ಕರ್ನಾಟಕವು ತುಳು

ಮತ್ತು ಕೊಡವ ಭಾಷೆಗಳನ್ನು ಅಧಿಕೃತ ರಾಜ್ಯಭಾಷೆಯಾಗಿ ಒಪ್ಪಿಕೊಳ್ಳಲು ಹಿಂದೇಟು ಹಾಕುತ್ತಿದೆ. ರಾಜ್ಯಕ್ಕೇ ಬೇಡವಾದ ಭಾಷೆಯನ್ನು ಕೇಂದ್ರ ಅಂಗೀಕರಿಸುವುದಾದರೂ ಹೇಗೆ? ಹೀಗೆ ನಮ್ಮ ಭಾಷಾ ರಾಜಕೀಯವು ಜಾಗತೀಕರಣ ಪ್ರಕ್ರಿಯೆಗಳೊಂದಿಗೆ ಸೇರಿಕೊಂಡು ಸಂಕೀರ್ಣ ವಾದ ಸನ್ನಿವೇಶ ನಿರ್ಮಾಣಗೊಂಡಿದೆ.

ಯುನೆಸ್ಕೋವು ಸಿದ್ಧಪಡಿಸಿದ 'ಭಾಷೆಗಳ ಜಾಗತಿಕ ಭೂಪಟ'ವು ಭಾರತದಲ್ಲಿನ ೧೭೨ ಭಾಷೆಗಳನ್ನು ಅಪಾಯದ ಅಂಚಿನಲ್ಲಿರುವ ಭಾಷೆಗಳೆಂದೂ, ಅದರಲ್ಲಿ ೧೦೧ ಭಾಷೆಗಳನ್ನು ಅತೀವ ಅಪಾಯದಲ್ಲಿರುವ ಭಾಷೆಗಳೆಂದೂ ೭೧ ಭಾಷೆಗಳನ್ನು ಎಲ್ಲ ಬಗೆಯ ಅಪಾಯಗಳಿಗೆ ಬಲಿಯಾಗುತ್ತಿರುವ ಭಾಷೆಗಳೆಂದೂ ಗುರುತಿಸಿದೆ. (Christopher Moseley, ed., UNESCO, Paris 2010). ಈ ಸಣ್ಣ ಭಾಷೆಗಳ ನ್ನಾಡುವ ಜನರಲ್ಲಿಯೂ ತಮ್ಮ ಮಾತೃಭಾಷೆಗಳ ಬಗೆಗೆ ಅಭಿಮಾನ ಕಡಿಮೆಯಾಗಿ, ಇಂಗ್ಲಿಷಿನ ಮೇಲೆ ಮೋಹ ಹೆಚ್ಚಾಗುತ್ತಲಿದೆ. ಹೀಗೆ ಭಾರತದಲ್ಲಿ ಸುಮಾರು ಮೂರು ಕೋಟಿಯ ಅರುವತ್ತು ಲಕ್ಷ ಜನಗಳ ಮಾತೃಭಾಷೆಗಳು ಇಂದು ಪತನಮುಖಿ ಯಾಗಿವೆ. ಭಾಷಾವಾರು ಪ್ರಾಂತ್ಯಗಳ ರಚನೆಯಾದಾಗ ಪ್ರಾದೇಶಿಕ ಭಾಷೆಗಳಿಗೆ ಮಹತ್ವ ಬಂದುವು. ಆದರೆ ಈ ಹಂತದಲ್ಲಿ ಪ್ರಾದೇಶಿಕ ಭಾಷೆಗಳ ಆಶ್ರಯದಲ್ಲಿರುವ, ಆದರೆ ಯಾವುದೇ ರಾಜ್ಯದ ಅಧಿಕೃತ ಭಾಷೆಗಳಲ್ಲದ ಸಣ್ಣ ಭಾಷೆಗಳು ತೀವ್ರ ಉಪೇಕ್ಷೆಗೆ ಒಳಗಾದುವು. ಸುಮಾರು ಒಂದು ಕೋಟಿ ಜನರಾಡುವ ತುಳುವನ್ನು ಕರ್ನಾಟಕ ರಾಜ್ಯ ಇಂದಿನವರೆಗೆ ಅಧಿಕೃತ ಭಾಷೆಯೆಂದೇ ಘೋಷಿಸಿಲ್ಲವಲ್ಲ! ಖಾಸಿ, ಜೈಂಟಿಯಾ, ಕೊಡವ, ಬ್ರಜ್ ಮೊದಲಾದ ಅನೇಕ ಸುಂದರ ಭಾಷೆಗಳ ಕತೆಯಾದರೂ ಅಷ್ಟೆ. ಕರ್ನಾಟಕದಲ್ಲಿ ಇವತ್ತಿಗೂ ತುಳು-ಕೊಡವದಂಥ ಭಾಷೆಗಳಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಪ್ರಾಧ್ಯಾಪಕರೇ ಇಲ್ಲ. ಕನ್ನಡದ ಅಧ್ಯಾಪಕರೇ ಈ ಭಾಷೆಗಳ ಉದ್ಧಾರದ ಕೆಲಸಗಳನ್ನೂ ಮಾಡಬೇಕಾಗಿದೆ. ದ್ರಾವಿಡ ಭಾಷಾವರ್ಗದಲ್ಲಿ ತಮಿಳು, ಮಲಯಾಳಂ, ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ಮಾತ್ರ ಸಾವಿರಾರು ಅಧ್ಯಾಪಕರಿದ್ದಾರೆ. ಉಳಿದ ಸುಮಾರು ೨೪ ಸ್ವತಂತ್ರ ಭಾಷೆಗಳಲ್ಲಿ ಪ್ರಾಧ್ಯಾಪಕರು ಏಕಿಲ್ಲ? ಒಟ್ಟಾರೆಯಾಗಿ ಇದರರ್ಥ ಇಷ್ಟೇ-

ಇಂದು ಸಣ್ಣ ಭಾಷೆಗಳ ಅಭಿವೃದ್ಧಿಯ ಕುರಿತು ಸರಕಾರಗಳಾಗಲೀ ವಿಶ್ವವಿದ್ಯಾಲಯಗಳಾಗಲೀ ಮಾಡಬೇಕಾದಷ್ಟು ಕೆಲಸಗಳನ್ನು ಮಾಡುತ್ತಿಲ್ಲ. ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಪ್ರಬಲವಾಗಿರುವ ಜನರ ಭಾಷೆಗಳು ಎಲ್ಲ ಸವಲತ್ತುಗಳನ್ನೂ ಪಡೆದುಕೊಳ್ಳುತ್ತಿವೆ. ದುರ್ಬಲರ ನಾಲಿಗೆ ಕಟ್ಟಿ ಹೋಗಿದೆ, ಅವರ ಭಾಷೆಗಳು ವಿನಾಶದತ್ತ ಚಲಿಸುತ್ತಿವೆ. ಸಂಸ್ಕೃತಿಯ ಬಗೆಗೆ ತಿಳುವಳಿಕೆಯಿಲ್ಲದ ಅಭಿವೃದ್ಧಿಯ ಪರಿಕಲ್ಪನೆಯು ಮೂಲತಃ ಅನಾಹುತಕಾರಿಯಾದುದು ಎಂಬುದನ್ನು ಜಗತ್ತಿನ್ನೂ ಅರ್ಥ ಮಾಡಿಕೊಂಡಿಲ್ಲ.

ಇಂಥ ಸಂದರ್ಭದಲ್ಲಿ ನಾವು ನಮ್ಮ ಸಂಶೋಧನೆಗಳ ಬಗೆಗೆ ಹೊಸದಾಗಿ ಯೋಚಿಸುವ ಕಾಲ ಬಂದಿದೆ. ಕನ್ನಡ ವಿಶ್ವವಿದ್ಯಾಲಯದಂಥ ಭಾಷಾಕೇಂದ್ರಿತ ಸಂಸ್ಥೆಯ ಜವಾಬ್ದಾರಿಗಳನ್ನೂ ನಾವು ಪುನರ್‌ರೂಪಿಸಿಕೊಳ್ಳಬೇಕಾಗಿದೆ. ಒಂದೆಡೆ ಸಂಶೋಧನೆಯ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು, ಇನ್ನೊಂದೆಡೆ ತಿಳುವಳಿಕೆಗಳು ಅಂತಾರಾಷ್ಟ್ರೀಯಗೊಳ್ಳುತ್ತಿರುವ ಆಧುನಿಕ ಪ್ರಕ್ರಿಯೆ, ಇವೆರಡರ ನಡುವೆ ನಾವು ಬದುಕುತ್ತಾ, ನಮ್ಮ ಧ್ವನಿಯು ಇತರರಿಗೆ ಕೇಳುವಂತೆ ಕೆಲಸ ಮಾಡಬೇಕಾಗಿದೆ. ನಮಗೆ ನಾವೇ ಮಾತಾಡಿಕೊಳ್ಳುವ ಕಾಲ ಮುಗಿದುಹೋಗಿದೆ. ಜಗತ್ತಿನೊಡನೆ ಗಂಭೀರವಾಗಿ ಸಂವಾದಿಸಬೇಕಾದ ಕಾಲ ಸನ್ನಿಹಿತವಾಗಿದೆ.

ನಮ್ಮ ಯೋಚನೆಗಳ ಬಗ್ಗೆ ಎಚ್ಚರದಿಂದಿರೋಣ,
ಅವು ಪದಗಳಾಗುತ್ತವೆ
ನಮ್ಮ ಪದಗಳ ಬಗ್ಗೆ ಎಚ್ಚರದಿಂದಿರೋಣ
ಅವು ಕ್ರಿಯೆಗಳಾಗುತ್ತವೆ,
ನಮ್ಮ ಕ್ರಿಯೆಗಳ ಬಗ್ಗೆ ಎಚ್ಚರದಿಂದಿರೋಣ
ಅವು ಅಭ್ಯಾಸಗಳಾಗುತ್ತವೆ,
ನಮ್ಮ ಅಭ್ಯಾಸಗಳ ಬಗ್ಗೆ ಎಚ್ಚರದಿಂದಿರೋಣ
ಅವು ವ್ಯಕ್ತಿತ್ವವಾಗಿರುತ್ತದೆ,
ನಮ್ಮ ವ್ಯಕ್ತಿತ್ವದ ಬಗ್ಗೆ ಎಚ್ಚರದಿಂದಿರೋಣ
ಅವು ನಾಡಿನ ಭವಿಷ್ಯವಾಗಿರುತ್ತದೆ.

೨೯. ಕನ್ನಡ ಸಂಸ್ಕೃತಿ ಬಹುತ್ವದ ನೆಲೆಗಳು

ಕುಲಪತಿಯವರಾದ ಡಾ. ಮಲ್ಲಿಕಾ ಎಸ್. ಘಂಟಿ ಅವರ ಸ್ವಾಗತ ಭಾಷಣ

ಪ್ರಪಂಚದಲ್ಲಿ ಭಾಷೆಗಾಗಿಯೇ ಇರುವ ಏಕೈಕ ವಿಶ್ವವಿದ್ಯಾಲಯವೆಂಬ ಹೆಮ್ಮೆಯೊಂದಿಗೆ ಹುಟ್ಟಿಕೊಂಡ ಕನ್ನಡ ವಿಶ್ವವಿದ್ಯಾಲಯ ಈಗ ಬೆಳ್ಳಿಹಬ್ಬದ ಹೊಸ್ತಿಲಲ್ಲಿದೆ. ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರು ಕರ್ನಾಟಕದ ಪ್ರತಿಷ್ಠಿತ ಕನ್ನಡ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಾಧಿಪತಿಗಳು, ಈ ನುಡಿಹಬ್ಬ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡು ಕನ್ನಡ ವಿಶ್ವವಿದ್ಯಾಲಯ ಕೊಡಮಾಡುವ ಡಿ.ಲಿಟ್. ಪದವಿ ನೀಡಲಿರುವರು. ಘನತೆವೆತ್ತ ರಾಜ್ಯಪಾಲರಾದ ಸನ್ಮಾನ್ಯ ಶ್ರೀ ವಾಜುಬಾಯಿ ರೂಡಾಬಾಯಿ ವಾಲಾ ಅವರನ್ನು ಕನ್ನಡ ವಿಶ್ವವಿದ್ಯಾಲಯದ ಪರವಾಗಿ ಆದರಪೂರ್ವಕವಾಗಿ ಸ್ವಾಗತಿಸುತ್ತೇನೆ. ಘನತೆವೆತ್ತ ಸನ್ಮಾನ್ಯ ಕುಲಾಧಿಪತಿಗಳಾಗಿರುವ ರಾಜ್ಯಪಾಲರ ಮಾರ್ಗದರ್ಶನದೊಂದಿಗೆ ಕನ್ನಡ ವಿಶ್ವವಿದ್ಯಾಲಯ ಹಲವಾರು ಕನಸುಗಳನ್ನು ಹೊತ್ತು ಮುನ್ನಡೆಯುತ್ತಿದೆಯೆಂಬುದನ್ನು ಪ್ರೀತಿಯಿಂದ ಹೇಳಬಯಸುತ್ತೇನೆ.

ಈ ಹೊತ್ತಿನಲ್ಲಿ ನಮ್ಮೊಂದಿಗಿರುವ ಕನ್ನಡ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳೂ, ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರು, ಹಿರಿಯ ರಾಜಕಾರಣಿಗಳು ಮತ್ತು ಕನ್ನಡ ವಿಶ್ವವಿದ್ಯಾಲಯ ೨೪ನೇ ನುಡಿಹಬ್ಬದಲ್ಲಿ ಪಿಎಚ್.ಡಿ. ಪದವಿಗಳನ್ನು ಪ್ರದಾನ ಮಾಡಲಿರುವ ಸನ್ಮಾನ್ಯ ಶ್ರೀ ಟಿ.ಬಿ.ಜಯಚಂದ್ರ ಅವರಿಗೆ ಕನ್ನಡ ವಿಶ್ವವಿದ್ಯಾಲಯದ ಪರವಾಗಿ ಪ್ರೀತಿ ಗೌರವಾದರದ ಸ್ವಾಗತ ಕೋರುತ್ತೇನೆ.

ಕನ್ನಡ ವಿಶ್ವವಿದ್ಯಾಲಯದ ಈ ನುಡಿಹಬ್ಬದಲ್ಲಿ ಘಟಿಕೋತ್ಸವ ಭಾಷಣ ಮಾಡಲಿರುವ ನಾಡಿನ ಪ್ರಸಿದ್ಧ ಚಿಂತಕರು, ಸಾಹಿತಿಗಳು ಆಗಿರುವ ಜೊತೆಗೆ ಕನ್ನಡ ವಿಶ್ವವಿದ್ಯಾಲಯಕ್ಕೆ ಭದ್ರ ಬುನಾದಿ ಹಾಕಿದವರುಗಳಲ್ಲಿ ಒಬ್ಬರಾಗಿರುವ ನಮ್ಮವರೆ ಆದ ಪ್ರೊ.ಪುರುಷೋತ್ತಮ ಬಿಳಿಮಲೆಯವರನ್ನು ಸಂತೋಷದಿಂದ ಸ್ವಾಗತಿಸುತ್ತೇನೆ.

ಕನ್ನಡ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಮತ್ತು ಆಡಳಿತ ಮಂಡಳಿ ಸದಸ್ಯರುಗಳನ್ನು, ಜನಪ್ರತಿನಿಧಿಗಳನ್ನು ಹಾಗೂ ಮಾಧ್ಯಮದ ಎಲ್ಲಾ ಹಿರಿಕಿರಿಯ ಸಹೋದರರನ್ನು ಮತ್ತು ವಿಶ್ವವಿದ್ಯಾಲಯದ ನನ್ನೆಲ್ಲ ಬಂಧುಗಳನ್ನು, ಸಭಿಕರುಗಳಿಗೆಲ್ಲ ವಿಶ್ವವಿದ್ಯಾಲಯದ ಪರವಾಗಿ ತುಂಬು ಹೃದಯದ ಸ್ವಾಗತ ಕೋರುತ್ತೇನೆ.

ಕಾಲಕ್ಕೆ ಹೊಸ ದೃಷ್ಟಿಯ ಅಗತ್ಯವೂ ಇದೆ. ಇದನ್ನು ವಿಶ್ವಕವಿ ಕುವೆಂಪು ಅವರು ಪರಿಭಾವಿಸಿರುವ ರೀತಿ "ಹೊಸತು ಎನ್ನುವ ಮಾತು ಕಾಲಕ್ಕೆ ಮಾತ್ರವಲ್ಲದೇ ಆತ್ಮಕೂ ಅನ್ವಯಿಸುತ್ತದೆ. ಅಷ್ಟೇ ಅಲ್ಲ, ವ್ಯಕ್ತಿಗಳಿಗೆ ಮಾತ್ರವೆ ಅಲ್ಲದೆ ತತ್ವಗಳಿಗೂ ಅನ್ವಯಿಸುತ್ತದೆ. ಕೆಲವು ಆಲೋಚನೆ, ಅಭಿಪ್ರಾಯಗಳಿವೆ, ಅವು ಅತ್ಯಂತ ಪುರಾತನವಾದರೂ ಸರ್ವದಾ ನೂತನವಾಗಿರುತ್ತವೆ. ಮತ್ತೆ ಕೆಲವು ಮೊನ್ನೆ ಮೊನ್ನೆ ಹುಟ್ಟಿದ ಹೊಸ ಸಿದ್ಧಾಂತಗಳಾದರೂ ಪ್ರಪಂಚದ ಬದುಕಿನ ನೆಮ್ಮದಿಯ ದೃಷ್ಟಿಯಿಂದ, ಸಂಸ್ಕೃತಿಯ ಏಳ್ಗೆಯ ದೃಷ್ಟಿಯಿಂದ, ಕಳಚಿ ಬಿಸಾಡಲು ಯೋಗ್ಯವಾದ ಹಳೆಯ ಚಿಂದಿ ಬೊಂತೆಗಳಾಗಿರುತ್ತವೆ." ಈ ಮಾತುಗಳು ೧೯೩೭ರಲ್ಲಿ ತರುಣರನ್ನು ಕುರಿತು ಕುವೆಂಪುರವರು ಮಾಡಿದ ಭಾಷಣದ ಸಾಲುಗಳಿವು. ಹೊಸ ಶತಮಾನದ ಹೊಸ್ತಿಲಲ್ಲಿ ಇರುವ ನಾವುಗಳು ಇಂದು ಇದನ್ನು ಇನ್ನಷ್ಟು ನೆನಪಿಸಿಕೊಳ್ಳಬೇಕಾಗಿದೆ. ಕುವೆಂಪುರವರು ಸಾಹಿತಿಯ ಅನಂತ ಸಾಧ್ಯತೆಗಳನ್ನು ಹೇಳುತ್ತಾರೆ. "ಅವನಿಂದ ರಾಷ್ಟ್ರ ನಿರ್ಮಾಣವಾಗಬಹುದು, ಮತ ಸ್ಥಾಪನೆಯಾಗಬಹುದು. ಅತೀ ಗಹನವಾದ ವಿಜ್ಞಾನ ಸಂಶೋಧನೆಯಾಗಬಹುದು, ಅಂಥ ಕವಿ ಸಾಕ್ರೆಟಿಸ್ ಆಗಬಹುದು, ತಪ್ಪಿದರೆ ಬುದ್ಧದೇವನಾಗಬಹುದು, ಅಶೋಕ ಚಕ್ರವರ್ತಿಯಾಗಬಹುದು, ಅಥವಾ ಪಂಪನಾಗಬಹುದು, ಅವನು ಐನ್‌ಸ್ಟೀನ್ ಬೇಕಾದರೂ ಆಗಬಹುದು ಅಥವಾ ಯೇಸುಕ್ರಿಸ್ತನಾದರೂ ಆಗಬಹುದು, ಆ ಸೃಷ್ಟಿ ಶಕ್ತಿಯಿಂದಲೇ ತ್ಯಾಗರಾಜರಂತಹ ಗಾನಯೋಗಿಗಳೂ ಮಹಾತ್ಮಾ ಗಾಂಧೀಜಿಯವರಂತಹ ಕರ್ಮಯೋಗಿಗಳೂ ಸಂಭವಿಸುತ್ತಾರೆ" ಎಂದು. ಈ ಸಂಭವಿಸುವ ಪ್ರಕ್ರಿಯೆಯಲ್ಲಿ ನಾವೆಲ್ಲರೂ ತೊಡಗುವ ಅಗತ್ಯವಿದೆ. ಯಾಕೆಂದರೆ ಈಗಾಗಲೇ ಶ್ರೀಸಾಮಾನ್ಯನು ತನ್ನ ಪರಂಪರೆಯ ತಿಳುವಳಿಕೆಯಿಂದ ಕನ್ನಡದ ಅಗಾಧವಾದ ಬದುಕನ್ನು ಕಟ್ಟಿದ್ದಾನೆ. ಅದು ರೈತನ ರೂಪದಲ್ಲಿ, ಕೂಲಿಕಾರನ ರೂಪದಲ್ಲಿ, ಹೆಣ್ಣಿನ ರೂಪದಲ್ಲಿ, ಸಂತನ ರೂಪದಲ್ಲಿ ನಮಗೆ ಬದುಕಲು ಅನುವು ಮಾಡಿಕೊಟ್ಟಿದ್ದಾನೆ. ಸಾಹಿತ್ಯ ಕೇವಲ ಬೌದ್ಧಿಕ ಕ್ರಿಯೆಯಲ್ಲ; ಬದುಕುವ ಕ್ರಿಯೆ. ಆದರೆ ಶ್ರೀಸಾಮಾನ್ಯನು ಜಗತ್ತನ್ನು ನೋಡುವ ಬಗೆಗೂ–ಒಬ್ಬ ಸಾಹಿತಿಯು ನೋಡುವ ಬಗೆಗೂ ಅಗಾಧವಾದ ಅಂತರ ಏರ್ಪಡುತ್ತಿರುವುದು ವಿಷಾದದ ಸಂಗತಿ. ಈ ಅಂತರ ಬದುಕಿಗೆ ಸಂಬಂಧಪಡದೇ, ಅಭಿವ್ಯಕ್ತಿಗೆ ಸಂಬಂಧಿಸಿದರೆ ಒಳ್ಳೆಯದು.

ಅಂತಹ ಅಂತರಗಳನ್ನು ಕಡಿಮೆಮಾಡುವ ಪ್ರಯತ್ನವನ್ನು ನಮ್ಮ ವಿಶ್ವವಿದ್ಯಾಲಯವು ಕಳೆದ ೨೫ ವರ್ಷಗಳಿಂದ ಮಾಡುತ್ತಲೇ ಬಂದಿದೆ.

'ಜನ ಬದುಕಬೇಕೆಂದು ಕಾವ್ಯಮಂ ಪೇಳ್ದೆ' ಎಂಬ ಆಶಯದೊಂದಿಗೆ ಕ್ರಿಯಾಶೀಲವಾಗಿರುವ ನಮ್ಮ ನಿಕಾಯಗಳು ವಿನಯದಿಂದಲೇ ಈ ಕೆಲಸವನ್ನು ಮಾಡಿವೆ. ಆದರೂ ನಡೆದದ್ದು ಒಂದು ಹೆಜ್ಜೆಯಾದರೆ, ನಡೆಯಬೇಕಾಗಿರುವುದು ಸಾವಿರ ಹೆಜ್ಜೆ ಎನ್ನುವ ಪ್ರಜ್ಞೆ ಸದಾ ನಮ್ಮನ್ನು ಕಾಡುತ್ತಿದೆ. ಕರ್ನಾಟಕವನ್ನು, ಕನ್ನಡವನ್ನು ಆಧುನಿಕತೆಗೆ ಸಿದ್ಧಗೊಳಿಸುವ ಎಲ್ಲ ಪ್ರಯತ್ನಗಳಲ್ಲಿ ನಮ್ಮ ವಿಶ್ವವಿದ್ಯಾಲಯದ ಪಾಲಿದೆ. ಪರಂಪರೆಯ ಸಮಕಾಲೀನತೆಯ ಒಳಗಿರುವ ತೀವ್ರತೆಯನ್ನು, ಸಹಾನುಭೂತಿಯನ್ನು, ಸಂಘರ್ಷವನ್ನು ಗಮನಿಸುತ್ತಲೇ ಜಗತ್ತನ್ನು ಕನ್ನಡದ ಮೂಲಕ ನೋಡುವ ಹೊಸ ದೃಷ್ಟಿಕೋನವನ್ನು ಕನ್ನಡ ವಿಶ್ವವಿದ್ಯಾಲಯವು ಬೆಳೆಸಿಕೊಂಡು ಬಂದಿದೆ. ಜಡಗೊಂಡ ಮಾರ್ಗಗಳನ್ನು ಮರುಸೃಷ್ಟಿಗೆ ಗುರಿಪಡಿಸುವುದು ನಮ್ಮ ವರ್ತಮಾನದ ಜವಾಬ್ದಾರಿಯಾಗಿದೆ ಎನ್ನುವುದನ್ನು ವಿಶ್ವವಿದ್ಯಾಲಯವು ಆರಂಭದಿಂದಲೂ ಇಲ್ಲಿಯವರೆಗೂ ಪಾಲಿಸಿಕೊಂಡು ಬರುತ್ತಲೇ ಇದೆ. ನಿನ್ನೆ–ಇಂದು–ನಾಳೆಗಳ ಕನ್ನಡ ಸಮಸ್ಯೆಗಳಿಗೆ ಕನ್ನಡವನ್ನು ಸಜ್ಜುಗೊಳಿಸಬೇಕಾಗಿದೆ. ಕರ್ನಾಟಕದ ಸಮಗ್ರತೆಯನ್ನು ಉಳಿಸಿಕೊಳ್ಳಲು ಸಾಹಿತ್ಯ ಮಾಡಬಹುದಾದ ಕೆಲಸವನ್ನು ರಾಜಕೀಯವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಯೋಚಿಸಿ ಕಟ್ಟುವ ಕೆಲಸವನ್ನು ಮಾಡುತ್ತಿದ್ದೇವೆ. ಅದನ್ನು ಮತ್ತೆ ಮತ್ತೆ ನೆನಪಿಸುವ ಸಂದರ್ಭವಾಗಿ 'ಈ ನುಡಿಹಬ್ಬ' ವಿದೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡಿಗರ ವಿವೇಕದಂತೆ, ಜ್ಞಾನ ಪರಂಪರೆಯಗಳ ಕಾವಲುಗಾರನಂತೆ ನಿಷ್ಠೆಯಿಂದ ಕಾರ್ಯಮಾಡುತ್ತ ಬೆಳ್ಳಿಹಬ್ಬದಾಚರಣೆಗಳ ಸಂಭ್ರಮದಲ್ಲಿದೆ. ಈ ಸಂಭ್ರಮಕ್ಕೆ ಕಾರಣರಾದ, ಕನ್ನಡ ವಿಶ್ವವಿದ್ಯಾಲಯದ ಕನಸಿಗೆ ಕಣ್ಣಾದ ಡಾ.ಚಂದ್ರಶೇಖರ ಕಂಬಾರ, ಡಾ.ಎಂ.ಎಂ.ಕಲಬುರ್ಗಿ, ಡಾ.ಎಚ್.ಜೆ.ಲಕ್ಕಪ್ಪಗೌಡ, ದೇಶಿ ಮಾರ್ಗ ಪರಂಪರೆಯ ಶೋಧದ ಹಾದಿಯಲ್ಲಿ ನಂತರದ ಕುಲಪತಿಗಳು ಕನ್ನಡ ವಿಶ್ವವಿದ್ಯಾಲಯವನ್ನು ಮುನ್ನಡೆಸಿರುವರು. ಎಲ್ಲೆಲ್ಲಿ ಕನ್ನಡಿಗರೋ ಅಲ್ಲೆಲ್ಲ ಕನ್ನಡ ಜ್ಞಾನದ ಕಂಪಿದೆ. ಜಗತ್ತಿನ ಜ್ಞಾನವನ್ನು ಕನ್ನಡದ ಮೂಲಕ ಕನ್ನಡದ ನೆಲದಲ್ಲಿ ಬಿತ್ತುವ, ಕನ್ನಡ ನೆಲದ ಜ್ಞಾನವನ್ನು ವಿಶ್ವಕ್ಕೆ ನೀಡುವ ಜವಾಬ್ದಾರಿಯನ್ನು, ಕನಸುಗಳನ್ನು ಹೊತ್ತುಕೊಂಡಿರುವ ವಿಶ್ವವಿದ್ಯಾಲಯ ನಾಲ್ಕು ನಿಕಾಯಗಳನ್ನು ಒಳಗೊಂಡು ಬೆಳೆಯುತ್ತಿದೆ. ನಡೆದ ದಾರಿ, ಪಡೆದ ಜ್ಞಾನವನ್ನು ಜನ ತೂಗಿ ನೋಡುವಂತೆ ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗ ಮತ್ತು ಸಂಶೋಧನೆ ಮಾಡಿದೆ.

ಜಾಗತೀಕರಣ, ಉದಾರಿಕರಣ, ಖಾಸಗಿಕರಣಗಳೆಲ್ಲ ನಮ್ಮನ್ನು ಆವರಿಸಿಕೊಂಡಿರುವ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ನಡಿಗೆ ಯಾವ ಎಡೆಗೆ ಎಂಬ ಕುತೂಹಲ ಪ್ರಜ್ಞಾವಂತರಲ್ಲಿದೆ. ದೇಶಿ ಜ್ಞಾನಗಳಿಗೆ ಆಧುನಿಕತೆಯ ಅಪಾಯಗಳನ್ನು ಎದುರಿಸುವ ಶಕ್ತಿಯಿದೆ. ಈ ಶಕ್ತಿಯನ್ನು ಗುರುತಿಸುವ ಪ್ರಯತ್ನವನ್ನು ವಿಶ್ವವಿದ್ಯಾಲಯ ತನ್ನ ಹಾದಿಯ ಸ್ಥಳೀಯ ಜ್ಞಾನಪರಂಪರೆಗಳನ್ನು ಭಾಷೆ, ಸಾಹಿತ್ಯ ಸಂಸ್ಕೃತಿ, ಸಮಾಜ ವಿಜ್ಞಾನಗಳ ಮೂಲಕ ಶೋಧಿಸುತ್ತಿದೆ. ಈ ಶೋಧಿತ ಜ್ಞಾನದ ಮೂಲಕ ಜಾಗತಿಕ ಆಕ್ರಮಣಕಾರಿ ಸಂಗತಿಗಳನ್ನು ಎದುರಿಸುವ ನೈತಿಕ ಬಲವನ್ನು ಗಟ್ಟಿಗೊಳಿಸುತ್ತಿದೆ.

ಕನ್ನಡ ವಿಶ್ವವಿದ್ಯಾಲಯದ ಮೂರು ನಿಕಾಯಗಳ ಎಲ್ಲ ವಿಭಾಗಗಳು ಶೈಕ್ಷಣಿಕ ಚಟುವಟಿಕೆಗಳನ್ನು ಅರ್ಥಪೂರ್ಣವಾಗಿ ನಿಭಾಯಿಸುತ್ತಿವೆ. ವಿಶ್ವವಿದ್ಯಾಲಯದ ಕ್ರಿಯಾಶೀಲ, ಅಧ್ಯಯನಶೀಲ ಅಧ್ಯಾಪಕ ಸಮುದಾಯ ಹಲವಾರು ಯೋಜನೆಗಳನ್ನು ರೂಪಿಸಿ ಅವುಗಳನ್ನು ನಿಗದಿತ ಅವಧಿಯಲ್ಲಿ ಪೂರೈಸುತ್ತ ವಿಶ್ವವಿದ್ಯಾಲಯದ ಧನಸಹಾಯ ಆಯೋಗ, ಐ.ಸಿ.ಎಚ್.ಆರ್., ಐ.ಸಿ.ಎಸ್.ಎಸ್.ಆರ್. ಮುಂತಾದ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಮತ್ತು ಸಂಸ್ಥೆಗಳ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡಿರುವರು. ವಿದ್ಯಾರ್ಥಿ ಸಮುದಾಯದಲ್ಲಿ ಬೌದ್ಧಿಕ ಸಾಮರ್ಥ್ಯವನ್ನು ಹೆಚ್ಚಿಸುವ, ಬದುಕಿನ ಭರವಸೆಗಳನ್ನು ಮೂಡಿಸುವುದರ ಕಡೆ ವಿಶ್ವವಿದ್ಯಾಲಯ ಗಂಭೀರವಾಗಿ ಅಧ್ಯಯನ ಮತ್ತು ಸಂಶೋಧನೆಯನ್ನು ಕೈಗೊಳ್ಳುತ್ತಿದೆ.

ವಿಶ್ವವಿದ್ಯಾಲಯ ತನ್ನ ವ್ಯಾಪ್ತಿಯಲ್ಲಿ ಭೌತಿಕವಾಗಿ ಹಿಗ್ಗಿಸಿಕೊಳ್ಳುವ ಅಗತ್ಯವಿದೆ. ಭೌತಿಕ ಸಂಪನ್ಮೂಲದ ಅಗತ್ಯದ ಜೊತೆಗೆ ಬೌದ್ಧಿಕ ಸಂಪನ್ಮೂಲದ ಅಗತ್ಯವೂ ಇದೆ. ವಿಶ್ವವಿದ್ಯಾಲಯದ ಈ ಅಗತ್ಯದ ಪೂರೈಕೆಗಾಗಿ ರಾಷ್ಟ್ರೀಯ ಉಚ್ಚತರ ಶಿಕ್ಷಣ ಅಭಿಯಾನವು (ರೂಸಾ) ವಿಶ್ವವಿದ್ಯಾಲಯದ ಮನವಿಯನ್ನು ಮನ್ನಿಸಿ ಇಪ್ಪತ್ತು ಕೋಟಿ ರೂಪಾಯಿಗಳ ಅನುದಾನವನ್ನು ನೀಡಿದೆ. ಸಂಶೋಧನಾ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ಕುರಿತು ಸಮಾಜ ಕಲ್ಯಾಣ ಇಲಾಖೆ ೧೫ ಕೋಟಿ ರೂಪಾಯಿಗಳ ಅನುದಾನವನ್ನು ನೀಡಿದೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ಬಂಜಾರ ಭಾಷೆ ಅಧ್ಯಯನಕ್ಕಾಗಿ ಕರ್ನಾಟಕ ತಾಂಡಾ ನಿಗಮವು ಮೂರು ಕೋಟಿ ರೂಪಾಯಿಗಳ ಅನುದಾನ ನೀಡಲು ಮುಂದಾಗಿದೆ. ಏಳು ನೂರ ಎಂಭತ್ತಾರು ಎಕರೆ ವಿಸ್ತೀರ್ಣವನ್ನು ಹೊಂದಿರುವ ವಿಶ್ವವಿದ್ಯಾಲಯದ ಭೂಮಿಯ ರಕ್ಷಣೆ ಕಾಡುತ್ತಿದೆ. ಆವರಣ ಗೋಡೆ ನಿರ್ಮಾಣಕ್ಕಾಗಿ

ಹೈದ್ರಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ವಿನಂತಿಸಲಾಗಿದೆ. ವಿಶ್ವವಿದ್ಯಾಲಯದಲ್ಲಿ ಕಾರಣಾಂತರಗಳಿಂದ ಸ್ಥಗಿತಗೊಂಡಿದ್ದ ವಿಭಾಗದ ಪತ್ರಿಕೆಗಳನ್ನು ಮತ್ತೆ ಪ್ರಕಟಿಸಲು ಕೈಗೆತ್ತಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ಜಗತ್ತಿನೊಂದಿಗೆ ಅನುಸಂಧಾನಕ್ಕೆ ಸಿದ್ಧರಾಗುವ ತರಬೇತಿಯನ್ನು ನೀಡುವಂತಿರುವ 'ದಿನಮಾತು' ಪ್ರಾರಂಭವಾಗಿದೆ. ಜಾಗತೀಕರಣದ ಆಕ್ರಮಣಕ್ಕೆ ಒಳಗಾಗಿ ಬಸವಳಿದಿರುವ ನಮ್ಮ ಗುಡಿ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸುವ ಅಗತ್ಯವಿದೆ. ಇದನ್ನು ಮನಗಂಡ ವಿಶ್ವವಿದ್ಯಾಲಯದ ಬಂಧುಗಳೆಲ್ಲ ಖಾದಿ ಧರಿಸುವ ಇಚ್ಛಾ ಶಕ್ತಿಯನ್ನು ಪ್ರದರ್ಶಿಸಿ ಕೈಮಗ್ಗವನ್ನೇ ಆಶ್ರಯಿಸಿರುವ ಸಮುದಾಯದ ಕಣ್ಣಿನಲ್ಲಿ ದೀಪದ ಬೆಳಕು ಮೂಡಿಸುವ ಪುಟ್ಟ ಪ್ರಯತ್ನವನ್ನು ಮಾಡಿದ್ದಾರೆ. ವಿದ್ಯಾರ್ಥಿಗಳ ಭಾವನಾತ್ಮಕ ಮತ್ತು ಬೌದ್ಧಿಕ ಲೋಕ ಬರಿದಾಗದಂತೆ ನೋಡಿಕೊಳ್ಳುವ ಸಲುವಾಗಿ ತಿಂಗಳ ಹುಣ್ಣಿಮೆ ಕಾರ್ಯಕ್ರಮ ಸಾಂಸ್ಕೃತಿಕ ವಾತಾವರಣವನ್ನು ಹುಟ್ಟು ಹಾಕಿದೆ. 'ಕನ್ನಡ' ಅನ್ನ ನೀಡುವ ಭಾಷೆಯಾಗಬೇಕು ಎಂಬುದು ಕೇವಲ ಆಶಯವಲ್ಲ ವಾಸ್ತವವಾಗಬೇಕಾದ ಹಾದಿಯನ್ನು ಹುಡುಕುತ್ತಿದೆ. ರಂಗಭೂಮಿ, ಸಿನಿಮಾ, ಕಿರುತೆರೆಯ ಸೃಷ್ಟಿತ ಉದ್ಯೋಗಗಳು ನಮ್ಮ ಗ್ರಾಮೀಣ ಪ್ರತಿಭಾವಂತ ಯುವಕರ ಕೈಗೆಟುಕಬೇಕೆಂಬ ಉದ್ದೇಶದಿಂದ ರಾಜಧಾನಿ ಬೆಂಗಳೂರಿನಲ್ಲಿ ಡಾ.ರಾಜಕುಮಾರ ಅಧ್ಯಯನ ಕೇಂದ್ರವನ್ನು ಪ್ರಾರಂಭಿಸಲು ಮುಂದಾಗಿ ಸ್ಥಳಕ್ಕಾಗಿ ಸರಕಾರಕ್ಕೆ ಮನವಿ ಸಲ್ಲಿಸಿದೆ. ಸರಕಾರ ಸಕಾರಾತ್ಮವಾಗಿ ಸ್ಪಂದಿಸಿದೆ. ವಿಶ್ವವಿದ್ಯಾಲಯದ ಪ್ರಕಟಿತ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟಕ್ಕಾಗಿ ಹೊಸಪೇಟೆಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರವು ಭೂಮಿಯನ್ನು ನೀಡಿದೆ. ಮುಂದಿನ ದಿನಗಳಲ್ಲಿ ವಿದ್ಯಾರ್ಥಿ ಓದುಗರಿಗೆ ಸುಲಭವಾಗಿ ಪುಸ್ತಕಗಳು ಲಭ್ಯವಾಗುವ ವ್ಯವಸ್ಥೆಯನ್ನು ವಿಶ್ವವಿದ್ಯಾಲಯ ಮಾಡಲಿದೆ.

ವಿಶ್ವವ್ಯಾಪ್ತಿಯನ್ನು ಹೊಂದಿರುವ ಕನ್ನಡ ವಿಶ್ವವಿದ್ಯಾಲಯವನ್ನು ಸಾಂಪ್ರದಾಯಿಕ ವಿಶ್ವವಿದ್ಯಾಲಯದಂತೆ ಭಾವಿಸುವುದು ಸರಿಯಾದ ಕ್ರಮವಲ್ಲ. ಹೀಗಾಗಿ ಸರಕಾರ ಕನ್ನಡ ವಿಶ್ವವಿದ್ಯಾಲಯದ ಆಶಯಗಳ ಈಡೇರಿಕೆಗಾಗಿ ಮಾನವ ಸಂಪನ್ಮೂಲ ಮತ್ತು ಆರ್ಥಿಕ ಸಂಪನ್ಮೂಲವನ್ನು ನೂರು ಕೋಟಿಯ ಅನುದಾನಕ್ಕೆ ಹೆಚ್ಚಿಸಬೇಕಾಗಿದೆ. ಈ ಕುರಿತು ಸರಕಾರಕ್ಕೆ ಮನವಿಯನ್ನು ಸಲ್ಲಿಸಲಾಗಿದೆ. ಸರಕಾರ ನೀಡುತ್ತದೆ ಎಂಬ ಭರವಸೆಯು ಕನ್ನಡ ವಿಶ್ವವಿದ್ಯಾಲಯಕ್ಕಿದೆ.

ನೂರಾರು ಕನಸುಗಳೊಂದಿಗೆ ಪಯಣಿಸುತ್ತಿರುವ ವಿಶ್ವವಿದ್ಯಾಲಯಕ್ಕೆ ಘನತೆವೆತ್ತ ಸನ್ಮಾನ್ಯ ರಾಜ್ಯಪಾಲರ ಮಾರ್ಗದರ್ಶನದ ಕಣ್ಬೆಳಕಿದೆ. ನಮ್ಮ ನಡಿಗೆ ಮಾನವತೆಯ ಕಡೆಗೆ ಎಂಬುದನ್ನು ವಿನಯದಿಂದ ನಾಡಿನ ಜನರಿಗೆಲ್ಲ ತಿಳಿಸುತ್ತ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರಗಳು.

೩೦. ಯೋಜನೆ ಅನುದಾನ ಆದಾಯ ಖರ್ಚು

ಕನ್ನಡ ವಿಶ್ವವಿದ್ಯಾಲಯ ಹಂಪಿ

2015–16ನೇ ಸಾಲಿನ ಏಪ್ರಿಲ್ 2015 ರಿಂದ ಮಾರ್ಚ್ 2016ರ ಮಾಹೆಯ ಜಮೆ ಮತ್ತು ಖರ್ಚುಗಳ ವಿವರಗಳ ತಃಖ್ತೆ

ಕ್ರ.ಸಂ	ಜಮದ ವಿವರಗಳು		ಸ್ವೀಕೃತಿಯಾದ ಮೊತ್ತ	ಕ್ರ.ಸಂ	ವೆಚ್ಚದ ವಿವರಗಳು	ಮೊತ್ತ	ಒಟ್ಟು ಖರ್ಚಿನ ಮೊತ್ತ
ಪ್ರಾರಂಭದ ಶಿಲ್ಕು			**197020305.44**				
I	**ಯೋಜನೇತರ**			I			
1	ವೇತನ ಅನುದಾನ ಮತ್ತು ಇತ್ಯಾದಿ	163955484.00		1	ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೇತನ ಪಾವತಿ	169205732.94	
2	ಹಣಕಾಸು ಅಧಿಕಾರಿಗಳು ಸಾಮಾನ್ಯ ಯಿಂದ ವೇತನ ಖಾತೆಗೆ ವರ್ಗಾಯಿಸ ಲಾಗಿದೆ. (ಆದಾಯ ತೆರಿಗೆ ಪಾವತಿಗೆ)	2500000.00		2	ಹಕಾಅ ವೇತನ ಖಾತೆಯಿಂದ ಸಾಮಾನ್ಯ ಖಾತೆಗೆ ವರ್ಗಾವಣೆ	2500000.00	
				3	ಈ ಹಿಂದೆ ವರ್ಗಾಹಿಸಿದ ಮೊತ್ತವನ್ನು ಮೂಲ ಖಾತೆಗೆ ವರ್ಗಾಹಿಸಲಾಗಿದೆ. (ವೇತನ ಖಾತೆ ಯಿಂದ9286 ರಿಂದ 9515ಗೆ ಖಾತೆಗೆ ವರ್ಗಾಹಿಸಲಾಗಿದೆ)	12000000.00	
	ಒಟ್ಟು ಮೊತ್ತ	**166455484.00**			**ಒಟ್ಟು ಮೊತ್ತ**	**183705732.94**	
2	ನಿವೃತ್ತಿ ವೇತನ ವಂತಿಗೆ ಹಾಗೂ ಬಡ್ಡಿ	9050482.00		II	ನಿವೃತ್ತಿ ವೇತನ/ಉಪದಾನ, ಇತ್ಯಾದಿ	9577970.00	
	ಒಟ್ಟು ಮೊತ್ತ	**9050482.00**			**ಒಟ್ಟು ಮೊತ್ತ**	**9577970.00**	

II	**ಯೋಜನೆ**						
1	ಅಭಿವೃದ್ಧಿ (ಸಹಾಯಾನುದಾನ)ಅನುದಾನ	35200000.00		III	ಅಧ್ಯಯನ ವಿಭಾಗಗಳ ವೆಚ್ಚಗಳು	3425838.00	
2	ಹಣಕಾಸು ಅಧಿಕಾರಿಗಳು ವೇತನ ಖಾತೆ ಯಿಂದ ಸಾಮಾನ್ಯ ಖಾತೆಗೆ ವರ್ಗಾಯಿಸಲಾಗಿದೆ.	2500000.00		IV	ನಿಕಾಯಗಳ ವಿಚಾರ ಸಂಕಿರಣ	0.00	
3	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆ, ಬೆಂಗಳೂರು	10000000.00		V	ವಿಶೇಷ ಯೋಜನೆಗಳು (ಇತರೆ)	310324.00	
4	ಹಂದಿಗೊಲ್ಲ ಹಂದಿಚಿಕ್ಕ ಅದರ ಸಮಾನ ಜಾತಿಗೆ ಸೇರಿಸುವ ಕುಲಶಾಸ್ತ್ರೀಯ ಅನುದಾನ	232500.00		VI	ವಿಜ್ಞಾನ ನಿಕಾಯ ವೆಚ್ಚಗಳು	185920.00	
5	ಚಿತ್ರಕಲೆ (7305)ಖಾತೆಯನ್ನು ಮುಕ್ತಾಯಗೊಳಿಸಿ ಸಾಮಾನ್ಯ ಖಾತೆ (7474)ಗೆ ವರ್ಗಾಯಿಸಿದೆ.	13473577.00		VII	ಭಾಷಾಂತರ ಕೇಂದ್ರ– ವೆಚ್ಚಗಳು	288282.00	
6	ರೂಸ ಯೋಜನೆಯ ಅನುದಾನ	99000000.00		VIII	ಇತರೆ ಆಡಳಿತ ವಿಭಾಗಗಳ ವೆಚ್ಚಗಳು	7062358.00	
	ಒಟ್ಟು ಮೊತ್ತ	**160406077.00**		IX	ಸಾಮಾನ್ಯ ಮತ್ತು ಆಡಳಿತ ವೆಚ್ಚಗಳು	77563468.40	
III	ಡಿಪ್ಲೋಮಾ ಪಠ್ಯಕ್ರಮ ಅನುದಾನ ಮತ್ತು ಇತ್ಯಾದಿ	17500850.00		X	ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ, ತಾಂತ್ರಿಕ ವಿಭಾಗ ಮತ್ತು ತೋಟಗಾರಿಕೆ ವೆಚ್ಚಗಳು	37190942.00	
IV	ವಿಶೇಷ ಘಟಕ ಯೋಜನೆ ಅನುದಾನ ಮತ್ತು ಇತ್ಯಾದಿ	7942963.00		XI	ಹಕಾಅ ಸಾಮಾನ್ಯ ಖಾತೆ ಯಿಂದ ವೇತನ ಖಾತೆಗೆ ವರ್ಗಾಹಿಸಲಾಗಿದೆ.	2500000.00	
V	ಗಿರಿಜನ ಉಪಯೋಜನೆ ಅನುದಾನ ಮತ್ತು ಇತ್ಯಾದಿ	2948549.00					
	ಒಟ್ಟು ಮೊತ್ತ	**28392362.00**			**ಒಟ್ಟು ಮೊತ್ತ**	**128527132.40**	

VI	**ಪ್ರಸಾರಾಂಗ**	2512998.22		XII	ಪ್ರಸಾರಾಂಗ	2193340.17	
	ಒಟ್ಟು ಮೊತ್ತ	**2512998.22**			**ಒಟ್ಟು ಮೊತ್ತ**	**2193340.17**	
VII	ದೂರಶಿಕ್ಷಣ	12050722.82		XIII	**ದೂರಶಿಕ್ಷಣ ನಿರ್ದೇಶನಾಲಯ**		
1	ಹಣಕಾಸು ಅಧಿಕಾರಿಗಳು ವೇತನ ಖಾತೆ ಸಂ:9286 ರಿಂದ ದೂರಶಿಕ್ಷಣ ಖಾತೆಗೆ ವರ್ಗಾಯಿಸಿದೆ.	12000000.00			ದೂರಶಿಕ್ಷಣ ಕೇಂದ್ರದ ವೆಚ್ಚಗಳು	16608809.71	
	ಒಟ್ಟು ಮೊತ್ತ	**24050722.82**			**ಒಟ್ಟು ಮೊತ್ತ**	**16608809.71**	
VIII.	ಶಿಷ್ಯವೇತನ	3241740.00		XIV	"ಚಿತ್ರಕಲೆ ಡಿಪ್ಲೋಮಾ ಮತ್ತು ಪದವಿ ಪಠ್ಯಕ್ರಮ ತರಬೇತಿ ಕಾರ್ಯಕ್ರಮ'– ವೆಚ್ಚಗಳು	12928265.00	
IX.	ದತ್ತಿನಿಧಿ	1162861.00		1	ಚಿತ್ರಕಲೆ ಖಾತೆ ಸಂಖ್ಯೆ(7305) ಮುಕ್ತಾಯಗೊಳಿಸಿ ಸಾಮಾನ್ಯ ಖಾತೆ (7474)ಗೆ ವರ್ಗಾಯಿಸಲಾಗಿದೆ.	13473577.00	
X.	ಪೀಠಗಳು	13694984.00		XV	ವಿಶೇಷ ಘಟಕ ಯೋಜನೆ (ಖಅಕ)	10577893.32	
XI.	ವಿದ್ಯಾರ್ಥಿಗಳಿಂದ ಹಾಗೂ ಇತರೆ ಶುಲ್ಕದಿಂದ ಬಂದ ಜಮ	9955516.46		XVI	ಗಿರಿಜನ ಉಪಯೋಜನೆ (ಖಿಖಕ)	5020882.02	
XII	ಬ್ಯಾಂಕಿನಲ್ಲಿ ಸಮನ್ವಯಗೊಳಿಸಿದ ವಿವರ	41752325.54		XVII	ಯುಜಿಸಿ	18065736.00	
XII	ಯುಜಿಸಿ ಮತ್ತು ಇತರೆ	6618702.76		XVIII	**ಯುಜಿಸಿ ಪ್ರಾಯೋಜಿತ ಅನುದಾನಗಳ ವೆಚ್ಚಗಳು**	179600.00	
				XIX	ಇತ್ಯಾದಿ ಖರ್ಚುಗಳು	464126.00	
				XX	ದತ್ತಿನಿಧಿ ವೆಚ್ಚಗಳು	1199044.00	
				XXI	**ಪೀಠಗಳ ವೆಚ್ಚಗಳು**	2643775.31	
				XXII	ಋಣ ಮತ್ತು ಠೇವಣಿಗಳು ವೆಚ್ಚಗಳು	1420116.00	

	ಒಟ್ಟು ಜಮ ಮೊತ್ತ	76426129.76	436820678.80		ಒಟ್ಟು ಖರ್ಚು ಮೊತ್ತ		376112422.87
	ವರ್ಗಾವಣೆ ಮೊತ್ತ		30473577.00		ವರ್ಗಾವಣೆ ಮೊತ್ತ		30473577.00
					ಅಂತಿಮ ಶಿಲ್ಕು		257728561.37
	ಒಟ್ಟು ಮಹಾ ಮೊತ್ತ		664314561.24		ಒಟ್ಟು ಮಹಾ ಮೊತ್ತ		664314561.24

ವರ್ಗಾಯಿಸಿದ ಮೊತ್ತ

ಕ್ರ.ಸಂ	ವಿವರ ಸಂಖ್ಯೆ	ಮೊತ್ತ		ಕ್ರ.ಸಂ	ವಿವರ ಸಂಖ್ಯೆ	ಮೊತ್ತ
I	2	2500000.00		I	2, 3	14500000.00
II	2, 5	15973577.00		XI	1	2500000.00
VII	1	12000000.00		XIV	1	13473577.00
	ಒಟ್ಟು ಮೊತ್ತ	**30473577.00**			ಒಟ್ಟು ಮೊತ್ತ	**30473577.00**

ಘೋಷ್ವಾರೆ

1	ಪ್ರಾರಂಭದ ಶಿಲ್ಕು		197020305.44		ಪಾವತಿಗಳು :	376112422.87	
2	ಜಮಾದ ಮೊತ್ತ :	436820678.80		1	ವರ್ಗಾವಣೆ ಮೊತ್ತ:	30473577.00	406585999.87
3	ವರ್ಗಾವಣೆ ಮೊತ್ತ:	30473577.00	467294255.80	2	ಅಂತಿಮ ಶಿಲ್ಕು		257728561.37
		ಒಟ್ಟು ಮಹಾ ಮೊತ್ತ	664314561.24			ಒಟ್ಟು ಮಹಾ ಮೊತ್ತ	664314561.24

ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿದ್ಯಾರಣ್ಯ

2015–16ನೇ ಸಾಲಿನ ಏಪ್ರಿಲ್ 2015 ರಿಂದ ಮಾರ್ಚ್ 2016ರ ಮಾಹೆಯಲ್ಲಿ ಸ್ವೀಕೃತಿಯಾದ ಅನುದಾನಗಳು ಮತ್ತು ಇತರೆ ಮೂಲದ ಜಮಗಳ ವಿವರಗಳು

I ಯೋಜನೇತರ		
ಕ್ರಸಂ	**ಜಮದ ವಿವರ**	**ಜಮದ ಮೊತ್ತ**
1	ಸರ್ಕಾರದಿಂದ ಸ್ವೀಕೃತಿಯಾದ ಬ್ಲಾಕ್ ಅನುದಾನ	150500000.00
2	ವೇತನ ಮತ್ತು ಭತ್ಯೆಗಳಿಗಾಗಿ (ಯುಜಿಸಿ 6ನೇ ವೇತನ ಆಯೋಗದ ಹಿಂಬಾಕಿಯ) ಅನುದಾನ	12450000.00
3	ವೇತನ ಕಡಿತ/ನಿವೃತ್ತಿ ವೇತನ ವಂತಿಗೆ /ರಜಾವಂತಿಗೆ /ಜಿಐಎಸ್/ಎಲ್.ಐ.ಸಿ	146513.00
4	ಹಬ್ಬದ ಮುಂಗಡ ಜಮ	10000.00
5	ವಸತಿಗೃಹ ಬಾಡಿಗೆ/ವಿದ್ಯುತ್ ಶುಲ್ಕ	80308.00
6	ಆಡಿಟ್ ವಸೂಲಾತಿ ಮೊತ್ತ	2304.00
7	ಉಳಿತಾಯ ಖಾತೆಯಿಂದ ಬಂದ ಬಡ್ಡಿ	623706.00
8	ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೋಟಿಗೊಡಿ: ವೇತನ ಕಡಿತ ಎಲ್ಐಸಿ. ಜಿಐಎಸ್ ಮನೆ ಬಾಡಿಗೆ	12630.00
9	ಇತರೆ ಜಮ (ಡಾ.ಎಸ್.ಸಿ.ಪಾಟೀಲ್)	130023.00
10	ಹಣಕಾಸು ಅಧಿಕಾರಿಗಳು ಸಾಮಾನ್ಯ ಖಾತೆ ಯಿಂದ ವೇತನ ಖಾತೆಗೆ ವರ್ಗಾಯಿಸಲಾಗಿದೆ.(ಆದಾಯ ತೆರಿಗೆ ಪಾವತಿಗೆ)	2500000.00
	ಒಟ್ಟು ಮೊತ್ತ	**166455484.00**

1	ಸಿಬ್ಬಂದಿಗಳ ನಿವೃತ್ತಿ ವೇತನ ವಂತಿಗೆ	5518188.00
2	ಸಿಬ್ಬಂದಿಗಳ ವೇತನ ಕಡಿತ ನಿವೃತ್ತಿ ವೇತನ ವಂತಿಗೆ	3093967.00
3	ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಿಂದ ಬಂದ ರಜಾವಂತಿಗೆ/ನಿವೃತ್ತಿ ವಂತಿಗೆ	15606.00
4	ವಿಶೇಷಾಧಿಕಾರಿಗಳು, ಕರ್ನಾಟಕ ಲಲಿತಕಲಾ ವಿ.ವಿ. ಬೆಂಗಳೂರು ಇವರ ರಜಾವಂತಿಗೆ/ನಿವೃತ್ತಿ ವಂತಿಗೆ	94568.00
5	ಸಾವಧಿ ಠೇವಣಿಯನ್ನು ಮುಕ್ತಾಯಗೊಳಿಸಿ ಉಳಿತಾಯ ಖಾತೆಗೆ ಜಮ	200000.00
6	ಠೇವಣಿ ಮೇಲಿನ ಬಡ್ಡಿ/ಇತರೆ/ಉಳಿತಾಯ ಖಾತೆಯಿಂದ ಬಂದ ಬಡ್ಡಿ	128153.00
	ಒಟ್ಟು ಮೊತ್ತ	**9050482.00**

II ಯೋಜನೆ		
1	ಅಭಿವೃದ್ಧಿ (ಸಹಾಯಾನುದಾನ)ಅನುದಾನ	35200000.00
2	ಹಣಕಾಸು ಅಧಿಕಾರಿಗಳು ವೇತನ ಖಾತೆ ಯಿಂದ ಸಾಮಾನ್ಯ ಖಾತೆಗೆ ವರ್ಗಾಯಿಸಲಾಗಿದೆ.	2500000.00
3	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆ, ಬೆಂಗಳೂರು	10000000.00

4	ಹಂದಿಗೊಲ್ಲ ಹಂದಿಚಿಕ್ಕ ಅದರ ಸಮಾನ ಜಾತಿಗೆ ಸೇರಿಸುವ ಕುಲಶಾಸ್ತ್ರೀಯ ಅನುದಾನ	232500.00
5	ಚಿತ್ರಕಲೆ (7305)ಖಾತೆಯನ್ನು ಮುಕ್ತಾಯಗೊಳಿಸಿ ಸಾಮಾನ್ಯ ಖಾತೆ (7474)ಗೆ ವರ್ಗಾಯಿಸಿದೆ.	13473577.00
6	ರೂಸ ಯೋಜನೆಯ ಅನುದಾನ	99000000.00
	ಒಟ್ಟು ಮೊತ್ತ	**160406077.00**
III	**ಡಿಪ್ಲೋಮಾ ಪಠ್ಯಕ್ರಮ ಅನುದಾನ**	17500000.00
	ಇತರೆ ಜಮ	850.00
IV	**ವಿಶೇಷ ಘಟಕ ಯೋಜನೆ ಅನುದಾನ**	7000000.00
	ಮುಂಗಡದಲ್ಲಿ ಉಳಿದ ಮೊತ್ತ	170870.00
	ಉಳಿತಾಯ ಖಾತೆಯಿಂದ ಬಂದ ಬಡ್ಡಿ	723653.00
	ನಗದಾಗದಿರುವ ಚೆಕ್ ಜಮ ತೆಗೆದುಕೊಳ್ಳಲಾಗಿದೆ	48440.00
V	**ಗಿರಿಜನ ಉಪಯೋಜನೆ ಅನುದಾನ**	2800000.00
	ನಗದಾಗದಿರುವ ಚೆಕ್ ಜಮ ತೆಗೆದುಕೊಳ್ಳಲಾಗಿದೆ	6656.00
	ಉಳಿತಾಯ ಖಾತೆಯಿಂದ ಬಂದ ಬಡ್ಡಿ	141893.00
	ಒಟ್ಟು ಮೊತ್ತ	**28392362.00**
VI	**ಪ್ರಸಾರಾಂಗ**	
1	ಪುಸ್ತಕ ಮತ್ತು ನಿಯತಕಾಲಿಕೆಗಳು ಮಾರಾಟ	834663.00
2	ಮುಂಗಡದಲ್ಲಿ ಉಳಿದ ಮೊತ್ತ	37081.00
3	ಉಳಿತಾಯ ಖಾತೆಯಿಂದ ಬಂದ ಬಡ್ಡಿ/ಇತರೆ/ಸಾವಧಿ ಠೇವಣಿಯಿಂದ ಬಂದ ಬಡ್ಡಿ/ಟಿಡಿಎಸ್/ನಗದಾಗದೇ ಇದ್ದ ಚೆಕ್ ಜಮ ತೆಗೆದುಕೊಳ್ಳಲಾಗಿದೆ.	114829.22
4	ಸಾವಧಿ ಠೇವಣಿ ಜಮ	400000.00
5	ಬೆಂಗಳೂರು ಕಚೇರಿ: ಪುಸ್ತಕ ಮತ್ತು ನಿಯತಕಾಲಿಕೆಗಳು ಮಾರಾಟ/ಬಡ್ಡಿ	1125924.00
6	ನಗದು ಪುಸ್ತಕದಲ್ಲಿ 02.05.2015ರಲ್ಲಿ ಕಡಿಮೆ ಜಮ ತೆಗೆದುಕೊಂಡಿರುವುದು ಈಗ ಜಮ ತೆಗೆದುಕೊಳ್ಳಲಾಗಿದೆ.	501.00
	ಒಟ್ಟು ಮೊತ್ತ	**2512998.22**
VII	**ದೂರಶಿಕ್ಷಣ**	
1	ದೂರಶಿಕ್ಷಣ ಕೇಂದ್ರ ನಗದು/ಡಿ.ಡಿ/ಚೆಕ್‌ಗಳ ಮೂಲಕ ವಿದ್ಯಾರ್ಥಿಗಳ ಶುಲ್ಕ ಜಮೆ	9649724.00
2	ದೂರಶಿಕ್ಷಣ ಕೇಂದ್ರ ಉಳಿತಾಯ ಖಾತೆಯಿಂದ ಬಂದ ಬಡ್ಡಿ	111335.00
3	ನಗದಾಗದಿರುವ ಚೆಕ್ ಜಮ ಮಾಡಲಾಗಿದೆ.	16340.00
4	ಮುಂಗಡದಲ್ಲಿ ಉಳಿದ ಮೊತ್ತ	724735.00
	ಬೇರೆ ಬೇರೆ ಶಾಖೆಗಳಿಂದ ಮತ್ತು ಆನ್‌ಲೈನ್ ಮೂಲಕ ಜಮ	269360.00
5	2008–09ನೇ ಸಾಲಿನ ಬ್ಯಾಂಕಿನಲ್ಲಿ ಜಮ ಆಗದಿರುವ ಮೊತ್ತ ಸಮನ್ವಯಗೊಳಿಸಿ ಸರಿಪಡಿಸಿ ಜಮ ತೆಗೆದುಕೊಳ್ಳಲಾಗಿದೆ.	395364.90
6	ವಿವಿಧ ವರ್ಷಗಳ ಬಡ್ಡಿ	30772.92
7	4/2015 ರಿಂದ 11/2015ರ ಜಮ ಮತ್ತು ಖರ್ಚು ಇರುವುದನ್ನು ಸರಿದೂಗಿಸಿದ ಮೊತ್ತ	740361.00
8	04/2015 ರಿಂದ 11/2015ರ ವರೆಗಿನ ಬಡ್ಡಿ	112730.00
